ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೧೨

**ಪಟ್ಟಿ – ೦೯**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಗುರುವಾರ, ದಿನಾಂಕ: ೦೯ನೇ ಜುಲೈ, ೨೦೧೫**

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

೫. ಸಣ್ಣ ಕೈಗಾರಿಕೆ ಸಚಿವರು

## ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ ದೇವತೆಗಳ ಚಿತ್ರ ಅಂಟಿಸುತ್ತಿರುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩೨ (೧೦೮೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿಯವರಿಗೆ ಸೇರಿದ ಕೆಲವು ಬಹಿರಂಗ ಸ್ಥಳಗಳಲ್ಲಿ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುವುದನ್ನು ತಡೆಯಲು, ಹಿಂದೂ ದೇವತೆಗಳ ಭಾವಚಿತ್ರಗಳನ್ನು ಸುತ್ತುಗೋಡೆ (ಕಾಂಪೌಂಡ್) ಗಳಿಗೆ ಅಂಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ದೈವಿ ಶಕ್ತಿಗಳಿಗಿರುವ ಧಾರ್ಮಿಕ ಹಿನ್ನೆಲೆ ಮತ್ತು ಅದರ ಪಾವಿತ್ರ್ಯತೆ ಮತ್ತು ಧಾರ್ಮಿಕ ಆಸಕ್ತರ ಭಾವನೆಗಳನ್ನು ಘಾಸಿಗೊಳಿಸುವ ಈ ಅನಾಗರೀಕ ವರ್ತನೆಯನ್ನು ತಡೆಯಲು ಸರ್ಕಾರ ಈವರೆಗೆ ಯಾವುದೇ ರೀತಿಯ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು;

(ಇ) ಈ ರೀತಿಯ ಸ್ಥಳಗಳನ್ನು ಗುರುತಿಸಿ ಜಿಲ್ಲಾಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡುವ ಮೂಲಕ ಹಿಂದೂ ಧರ್ಮೀಯರ ಧಾರ್ಮಿಕ ಭಾವನೆಗಳಿಗೆ ಮತ್ತು ನಂಬಿಕೆಗಳಿಗೆ ಸದ್ಯ ಆಗುತ್ತಿರುವ ನೋವನ್ನು ತಡೆಯಲು ಮುಂದಿನ ದಿನಗಳಲ್ಲಿ ತತ್‌ಕ್ಷಣ ಕ್ರಮಗಳನ್ನು ಜರುಗಿಸಲಾಗುವುದೇ?

## ಪೊಲೀಸ್ ಇಲಾಖೆಯಲ್ಲಿ ಪೇದೆಗಳನ್ನು ಆರ್ಡರ್ಲಿ ಕರ್ತವ್ಯಕ್ಕೆ ನಿಯೋಜಿಸುವ ಬಗ್ಗೆ

**ಶ್ರೀ ಸಿ.ಹೆಚ್.ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) –**

೮೩೩ (೧೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಗಳ ಮನೆಗಳಲ್ಲಿ ಮನೆ ಕೆಲಸಕ್ಕಾಗಿ ಪೊಲೀಸ್ ಪೇದೆಗಳನ್ನು ಆರ್ಡರ್ಲಿ ರೂಪದಲ್ಲಿ ನಿಯೋಜಿಸಿಕೊಳ್ಳುತ್ತಿರುವುದು ನಿಜವೇ;

(ಆ) ಈ ಹಿನ್ನೆಲೆಯಲ್ಲಿ ಯಾವ ಯಾವ ದರ್ಜೆಯ ಅಧಿಕಾರಿಗಳಿಗೆ ಎಷ್ಟೆಷ್ಟು ಜನ ಪೇದೆಗಳನ್ನು ಆರ್ಡರ್ಲಿ ಕರ್ತವ್ಯಕ್ಕೆ ನಿಯೋಜನೆಗೊಳಿಸಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಇ) ದೇಶದ ಇತರೆ ರಾಜ್ಯಗಳಲ್ಲಿ ಈ ರೀತಿಯ ಕರ್ತವ್ಯಗಳ ನಿಯೋಜನೆಯನ್ನು ನಿಷೇಧಿಸಲಾಗಿರುವ ರಾಜ್ಯಗಳು ಯಾವುವು;

(ಈ) ರಾಜ್ಯದಲ್ಲಿ ಆರ್ಡರ್ಲಿ ಕರ್ತವ್ಯವನ್ನು ನಿಷೇಧಿಸಿ ಸದರಿ ನೌಕರರನ್ನು ಕಾನೂನು ಸುವ್ಯವಸ್ಥೆ ಕಾಪಾಡುವ ಕರ್ತವ್ಯಕ್ಕೆ ನಿಯೋಜನೆ ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ?

## ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅವ್ಯವಹಾರಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೪ (೧೧೩೧) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ದಿ: ೧೯/೪/೨೦೦೬ರ ಸರ್ಕಾರಿ ಆದೇಶದನ್ವಯ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಿಡಿಎ ನೌಕರರಿಗೆ ನಿವೇಶನಗಳನ್ನು ಹಂಚಿರುವುದು ನಿಜವೆ; ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಷ್ಟು ಎಕರೆ ಜಮೀನನ್ನು ಮಂಜೂರು ಮಾಡಿದೆ; ಇನ್ನೂ ಬಿಡುಗಡೆಗೊಳಿಸಬೇಕಾಗಿರುವ ಜಮೀನು ಎಷ್ಟು; ಎಷ್ಟೆಷ್ಟು ಸರ್ಕಾರಿ ಮತ್ತು ಹಿಡುವಳಿ ಜಮೀನು ಸೇರಿದೆ;

(ಆ) ಸದರಿ ಜಮೀನಿನಲ್ಲಿ ಇಲ್ಲಿಯವರೆಗೂ ಯಾವ್ಯಾವ ಅಳತೆಯ ಎಷ್ಟೆಷ್ಟು ನಿವೇಶನಗಳನ್ನು ರಚಿಸಲಾಗಿದೆ; ಇದಕ್ಕೆ ತಗಲಿರುವ ವೆಚ್ಚ ಎಷ್ಟು; ಯಾವ್ಯಾವ ಅಳತೆಯ ನಿವೇಶನಗಳನ್ನು ಯಾರ್ಯಾರಿಗೆ ಹಂಚಲಾಗಿದೆ; ಇವರಲ್ಲಿ ಪ್ರಾಧಿಕಾರದ ಹಾಲಿ, ಮತ್ತು ನಿವೃತ್ತ ನೌಕರರೆಷ್ಟು;

(ಇ) ಬಿಡಿಎಗೆ ಎರವಲು ಸೇವೆಯ ನೌಕರರೆಷ್ಟು; ಇತರೆ ನೌಕರರೆಷ್ಟು ಮತ್ತು ಸಾರ್ವಜನಿಕರೆಷ್ಟು; (ಹೆಸರು, ಸಂಘದ ಸದಸ್ಯತ್ವ ಸಂಖ್ಯೆ, ಹಂಚಿಕೆಯಾದ ನಿವೇಶನ ಸಂಖ್ಯೆ ಮತ್ತು ವಿಸ್ತೀರ್ಣ ಹಾಗೂ ವಿಳಾಸವಾರು ವಿವರ ನೀಡುವುದು?

(ಈ) ಸದರಿ ಸಂಘದ ವತಿಯಿಂದ ನಿಯಮಗಳ ಪ್ರಕಾರ ಪ್ರಾಧಿಕಾರದ ನೌಕರರಲ್ಲದ ಇತರರಿಗೆ ನಿವೇಶನ ಹಂಚಲು ಅವಕಾಶವಿದೆಯೇ; ಇದ್ದಲ್ಲಿ ಎಷ್ಟು; (ನಿಯಮಗಳ ಪ್ರತಿಗಳನ್ನು ಒದಗಿಸುವುದು)

(ಉ) ಸದರಿ ಸಂಘದ ಕಡತಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ಮುಟ್ಟುಗೋಲು (ಸೀಜ್) ಹಾಕಿಕೊಂಡಿದ್ದು ನಿಜವೇ; ಇದ್ದಲ್ಲಿ, ಕಾರಣವೇನು; ಮುಟ್ಟುಗೋಲು ಹಾಕಿಕೊಂಡಿದ್ದ ದಾಖಲಾತಿಗಳನ್ನು ಯಾವ ದಿನಾಂಕದಂದು ಬಿಡುಗಡೆ ಮಾಡಿದೆ; ಬಿಡುಗಡೆಯಾದ ದಿನಾಂಕದಿಂದ ಇಲ್ಲಿಯವರೆಗೂ ಎಷ್ಟು ಅಳತೆಯ ನಿವೇಶನಗಳನ್ನು ಯಾರ್‍ಯಾರಿಗೆ ನೊಂದಾಯಿಸಲಾಗಿದೆ; (ಮಾಹಿತಿ ಒದಗಿಸುವುದು)

(ಊ) ಸದರಿ ಸಂಘದ ವಿರುದ್ಧ ಸರ್ಕಾರವು ತನಿಖೆಗೆ ಆದೇಶಿರುವುದು ನಿಜವೆ; ಈ ತನಿಖಾ ಆದೇಶದ ವಿರುದ್ಧ ಸಂಘದ ಅಧ್ಯಕ್ಷರು ಯಾವ ದಿನಾಂಕದಂದು ತಡೆಯಾಜ್ಞೆ ತಂದಿದ್ದಾರೆ; ಇದನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ರಸ್ತೆಗಳ ಸ್ಥಿತಿಗತಿ ಪರಿಶೀಲನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೫ (೧೦೫೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚೆಗೆ ಬೆಂಗಳೂರು ರಸ್ತೆಗಳ ಸ್ಥಿತಿಗತಿ ಪರಿಶೀಲನೆ ನಡೆಸಲಾಯಿತೆ; ನಡೆಸಿದ್ದಲ್ಲಿ, ಸಂಕ್ಷಿಪ್ತ ವಿವರ ನೀಡುವುದು ಹಾಗೂ ರಸ್ತೆ ನಿರ್ಮಾಣ ಮಾಡಿದ ಗುತ್ತಿಗೆದಾರರೇ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡಬೇಕೆನ್ನುವ ಆದೇಶ ನೀಡಿರುವುದು ನಿಜವೇ; ಎಷ್ಟು ವರ್ಷಗಳವರೆಗೆ ನಿರ್ವಹಿಸಬೇಕು; ನಿರ್ವಹಣೆ ಪಾಲಿಸದಿದ್ದಲ್ಲಿ ಹಾಕುವ ದಂಡವೆಷ್ಟು; ಈ ರೀತಿಯ ನಿರ್ವಹಣೆಯ ನಿಯಮವನ್ನು ಗುತ್ತಿಗೆ ಸಂದರ್ಭದಲ್ಲಿ ನೀಡಲಾಗಿತ್ತೆ;

(ಆ) ಬಿ.ಡಬ್ಲ್ಯೂ.ಎಸ್.ಎಸ್.ಬಿ ಯವರು ಅಥವಾ ಬೆಸ್ಕಾಂನವರು ಅಗೆದು ರಸ್ತೆಯನ್ನು ಹಾಳುಗೆಡವಿದ್ದಲ್ಲಿ ರಸ್ತೆಗಳ ಪರಿಶೀಲನೆಯ ಸಂದರ್ಭದಲ್ಲಿ ಅದರ ಮಾಹಿತಿಯನ್ನು ತೆಗೆದುಕೊಳ್ಳಲಾಗಿದೆಯೇ; (ವಿವರ ನೀಡುವುದು)

(ಇ) ಅದರ ಮಾಹಿತಿ ತೆಗೆದುಕೊಂಡಿಲ್ಲವಾದಲ್ಲಿ ಕಾರಣವೇನು;

(ಈ) ಸರ್ಕಾರಿ ಅಥವಾ ಅರೆಸರ್ಕಾರಿ ಮಂಡಳಿಯಿಂದ ರಸ್ತೆ ಅಗೆಯಲ್ಪಟ್ಟಿದ್ದು, ದುರಸ್ಥಿಯಾಗಿರದಿದ್ದರೆ ಯಾರು ಹೊಣೆಯಾಗುತ್ತಾರೆ; ಇಲ್ಲಿಯವರೆಗೆ ಕ್ರಮ ತೆಗೆದುಕೊಳ್ಳಲಾಗಿದೆಯೇ ಸಂಕ್ಷಿಪ್ತ ವಿವರ ನೀಡುವುದು, ಇಲ್ಲವಾದಲ್ಲಿ ಕಾರಣವೇನು? (ವಿವರ ನೀಡುವುದು)

## ವಯೋವೃದ್ಧರಿಗೆ ಮೋಸ ಮಾಡುತ್ತಿರುವ ವೈದ್ಯರ ತಂಡದ ಪೊಲೀಸ್ ಪ್ರಕರಣಗಳ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೬ (೧೦೫೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಯೋವೃದ್ಧರಿಗೆ ಕಾಲು ನೋವು, ಮಂಡಿ ನೋವು ಇನ್ನಿತರೆ ರೋಗ ಗುಣಪಡಿವುದಾಗಿ ತಾತ್ಕಾಲಿಕ ಆಯುರ್ವೇದಿಕ್ ಔಷಧ ಅಂಗಡಿ ತೆರೆದು, ವೃದ್ಧರಿಂದ ಎಣ್ಣೆ ಮತ್ತಿತರ ಸಾಮಾಗ್ರಿ ತರಿಸಿಕೊಂಡು ಅದಕ್ಕೆ ಕೆಲವು ಪುಡಿಗಳನ್ನು ಮಿಶ್ರಮಾಡಿ ನೀಡುವುದರ ಮೂಲಕ ಸಾವಿರಾರು ಲಕ್ಷಾಂತರ ಹಣ ಪಡೆದು ವಂಚಿಸುತ್ತಿದ್ದ ತಂಡವನ್ನು ಇತ್ತೀಚೆಗೆ ಬೆಂಗಳೂರಿನ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಂದಿಸಿರುವುದು ನಿಜವೇ; ನಿಜವಾಗಿದ್ದಲ್ಲಿ ತಂಡದ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರ ನೀಡುವುದು;

(ಆ) ಎಷ್ಟು ವರ್ಷಗಳಿಂದ ಈ ರೀತಿಯ ಜಾಲ ನಡೆಸುತ್ತಿದ್ದಾರೆ; ರಾಜ್ಯದ ಯಾವ ಯಾವ ಸ್ಥಳಗಳ ಪೊಲೀಸ್ ಠಾಣೆಗಳಲ್ಲಿ ಈ ರೀತಿಯ ಪ್ರಕರಣಗಳು ಯಾವ ಯಾವ ದಿನಾಂಕಗಳಂದು ಎಷ್ಟು ಬಾರಿ ದಾಖಲಾಗಿವೆ;

(ಇ) ಈ ಜಾಲದಲ್ಲಿ ಇರುವವರ ವಿದ್ಯಾರ್ಹತೆ ವಿವರಗಳೇನು; ಇವರಿಂದ ಮೋಸ ಹೋಗಿರುವುದಾಗಿ ದೂರು ನೀಡಿರುವವರ ಹಣದ ಮೊತ್ತ ಎಷ್ಟು; ಇವರಲ್ಲಿ ಯಾರಿಗಾದರೂ ಹಣ ಹಿಂತಿರುಗಿಸಲಾಗಿದೆಯೇ? (ಪ್ರಕರಣವಾರು ವಿವರ ನೀಡ್ನುವುದು)

**ನಮ್ಮ ಮೆಟ್ರೋ ಕಾಮಗಾರಿ ವೇಳೆ ಟನಲ್ ಬೋರಿಂಗ್ ಮೆಷಿನ್ ಕೆಟ್ಟ ಪರಿಣಾಮ ಆಗಿರುವ ನಷ್ಟದ ಬಗ್ಗೆ.**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೭ (೧೦೫೫) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಮಲ್ಲೇಶ್ವರ ಸಂಪಿಗೆ ರಸ್ತೆಯಿಂದ ಮೆಜೆಸ್ಟಿಕ್ ಮಾರ್ಗದಲ್ಲಿ ನಮ್ಮ ಮೆಟ್ರೋ ಮೊದಲ ಹಂತದ ಕಾಮಗಾರಿ ವೇಳೆ ಟನಲ್ ಬೋರಿಂಗ್ ಮೆಷಿನ್ ಕೆಟ್ಟು ಹೋಗಿರುವುದು ನಿಜವೇ; ನಿಜವಾಗಿದ್ದಲ್ಲಿ, ಯಾವಾಗ ಮತ್ತು ಹೇಗೆ ಎಂಬ ವಿವರ ನೀಡುವುದು;

(ಆ) ಇದನ್ನು ಇನ್ನೂ ಹೊರತೆಗೆದಿಲ್ಲದಿರುವುದು ನಿಜವೇ; ವಿಳಂಬಕ್ಕೆ ಕಾರಣವೇನು;

(ಇ) ಇದರ ಕಾರಣದಿಂದಾಗಿ ಮೆಟ್ರೊ ಕಾಮಗಾರಿಯಲ್ಲಿ ವಿಳಂಬವಾಗುತ್ತಿಲ್ಲವೇ; (ವಿವರ ನೀಡುವುದು)

(ಈ) ಸದರಿ ಟನಲ್ ಬೋರಿಂಗ್ ಮೆಷಿನ್ನಿನ ರಿಪೇರಿ ಹಾಗೂ ಕಾಮಗಾರಿಯು ವಿಳಂಬವಾಗಿರುವ ಕಾರಣದಿಂದಾಗಿ ಸರ್ಕಾರಕ್ಕೆ ಆಗಿರುವ ಮತ್ತು ಆಗಬಹುದಾದ ನಷ್ಟವೇನು;

(ಉ) ಕೆಟ್ಟಿರುವ ಯಂತ್ರವನ್ನು ಹೊರತೆಗೆದು ಕಾಮಗಾರಿ ಮುಂದುವರೆಸಲು ತೆಗೆದುಕೊಂಡಿರುವ ಕ್ರಮವೇನು; ಬೇಕಾಗುವ ಕಾಲಾವಧಿ ಏನು?

## ವಕೀಲರ ಕಲ್ಯಾಣ ನಿಧಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೮ (೧೦೫೬) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಕೀಲರ ಕಲ್ಯಾಣ ನಿಧಿಯಿಂದ ಮೃತ ವಕೀಲರ ಕುಟುಂಬಗಳಿಗೆ ಅಥವಾ ನಿವೃತ್ತರಾದ ವಕೀಲರಿಗೆ ಪ್ರಸ್ತುತ ನೀಡುತ್ತಿರುವ ಮೊತ್ತವೆಷ್ಟು; (ವಿವರ ನೀಡುವುದು)

(ಆ) ಪ್ರಸ್ತುತ ನೀಡಲಾಗುತ್ತಿರುವ ಮೊತ್ತವನ್ನು ಎಷ್ಟು ವರ್ಷಗಳಿಂದ ನಿಗದಿಪಡಿಸಲಾಗಿದೆ;

(ಇ) ನಿಗದಿಯಾಗಿರುವ ಮೊತ್ತವನ್ನು ಹೆಚ್ಚಿಸುವ ಅಗತ್ಯವಿದೆಯೇ; ಇಲ್ಲವಾದಲ್ಲಿ, ಕಾರಣವೇನು;

(ಈ) ನಿಗದಿಯಾಗಿರುವ ಮೊತ್ತವನ್ನು ಹೆಚ್ಚಿಸುವಲ್ಲಿ ಸರ್ಕಾರದ ನಿಲುವೇನು?

## ಮೈಸೂರಿನಲ್ಲಿ ಕೇರಳ ಚಿನ್ನಾಭರಣ ವ್ಯಾಪಾರಿ ದರೋಡೆ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩೯ (೧೦೭೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನಲ್ಲಿ ಕೇರಳದ ಚಿನ್ನಾಭರಣ ವ್ಯಾಪಾರಿಯ ದರೋಡೆ ಪ್ರಕರಣದಲ್ಲಿ ಪೊಲೀಸ್ ಇಲಾಖೆಯ ಕೆಳಹಂತದ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕೆಳಹಂತದ ಅಧಿಕಾರಿಗಳನ್ನು ರಕ್ಷಿಸಲು ಸಂಬಂಧಪಟ್ಟ ಐ.ಜಿ.ಪಿ ಶಾಮೀಲಾಗಿರುವುದು ನಿಜವೇ;

(ಇ) ಹಾಗಿದ್ದಲ್ಲಿ, ಇವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

## ಬಿ.ಡಿ.ಎ. ವತಿಯಿಂದ ಹೊರವರ್ತುಲ ರಸ್ತೆ ನಿರ್ಮಿಸುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೦ (೧೦೭೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಡಿ.ಎ ವತಿಯಿಂದ ಹೊರವರ್ತುಲ ರಸ್ತೆಗಳನ್ನು ನಿರ್ಮಿಸಲು ಸರ್ಕಾರ ಅನುಮತಿ ನೀಡಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ಕಿ.ಮೀ. ರಸ್ತೆಯನ್ನು ಯಾವ ಯಾವ ಸ್ಥಳಗಳ ಮೂಲಕ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ; (ಪೂರ್ಣ ವಿವರ ಒದಗಿಸುವುದು)

(ಆ) ಸದರಿ ರಸ್ತೆ ನಿರ್ಮಾಣಕ್ಕೆ ಈವರೆವಿಗೂ ಎಷ್ಟು ಜಮೀನನ್ನು ಸರ್ಕಾರ ವಶಪಡಿಸಿಕೊಂಡಿದೆ; ಹಾಗೂ ಇನ್ನು ಎಷ್ಟು ಜಮೀನನ್ನು ವಶಪಡಿಸಿಕೊಳ್ಳಬೇಕಾಗಿದೆ;

(ಇ) ಕಳೆದ ೨ ವರ್ಷಗಳಿಂದ ಹೊರವರ್ತುಲ ರಸ್ತೆ ಮಾಡುವುದಾಗಿ ಅನೇಕ ಬಾರಿ ಸರ್ಕಾರ ಹೇಳಿಕೆಗಳನ್ನು ನೀಡಿದ್ದರೂ, ಸದರಿ ಕಾಮಗಾರಿ ಪ್ರಾರಂಭಿಸಲು ಸರ್ಕಾರ ವಿಫಲವಾಗಲು ಕಾರಣವೇನು; ಇನ್ನೆಷ್ಟು ತಿಂಗಳುಗಳಲ್ಲಿ ಸದರಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

(ಈ) ಸರ್ಕಾರ ಕಳೆದ ೨ ವರ್ಷಗಳಿಂದ ಈ ರಸ್ತೆ ಕಾಮಗಾರಿಗಾಗಿ ಕಾಯ್ದಿರಿಸಿರುವ ಹಣದ ಮೊತ್ತವೆಷ್ಟು?

**ಬಿ.ಬಿ.ಎಂ.ಪಿ ವ್ಯಾಪ್ತಿಯ ನಿವೇಶನಗಳಿಗೆ 'ಎ' ಖಾತಾ ನೀಡುವ ಬಗ್ಗೆ**

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೧ (೧೦೫೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳಿಂದ ಪರಿವರ್ತನೆಗೊಂಡು ಭೂ ಅಭಿವೃದ್ಧಿದಾರರಿಂದ ನಿವೇಶನಗಳಾಗಿ ಪರಿವರ್ತನೆಗೊಂಡು 'ಬಿ' ಖಾತ ಹೊಂದಿರುವ ನಿವೇಶನಗಳ ಸಂಖ್ಯೆ ಎಷ್ಟು; (ವಾರ್ಡ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ 'ಬಿ' ಖಾತ ಹೊಂದಿರುವ ಬಿಡಿ ನಿವೇಶನದಾರರಿಗೆ 'ಎ' ಖಾತ ಹೊಂದಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಆಧಾರ್ ನೋಂದಣಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೪೨ (೧೦೭೫) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಇದುವರೆಗೆ ಆಧಾರ್ ನೋಂದಣಿ ಪಡೆದಿರುವವರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಆಧಾರ್ ನೋಂದಣಿ ಕೇಂದ್ರಗಳು ಕೆಲಸ ಮಾಡುತ್ತಿವೆ;

(ಇ) ಆಧಾರ್ ನೋಂದಣಿ ಕೇಂದ್ರಗಳಲ್ಲಿ ನೋಂದಾವಣೆ ಕಾರ್ಯಕ್ಕೆ ಸಾಕಷ್ಟು ಸಿಬ್ಬಂದಿ ಹಾಗೂ ಕಂಪ್ಯೂಟರ್‌ಗಳಿಲ್ಲದೆ ಗ್ರಾಮೀಣ ಪ್ರದೇಶದ ಜನರಿಗೆ ಅನಾನುಕೂಲ ಆಗಿದ್ದು, ಹೆಚ್ಚು ಸಿಬ್ಬಂದಿ ಹಾಗೂ ಕಂಪ್ಯೂಟರ್ ಒದಗಿಸುವ ಮೂಲಕ ಆಧಾರ್ ನೋಂದಣಿ ಕಾರ್ಯಕ್ರಮವನ್ನು ಚುರುಕುಗೊಳಿಸಲಾಗುವುದೇ?

## ನಿಷ್ಕ್ರಿಯವಾಗಿರುವ 'ಭಯೋತ್ಪಾದಕ ನಿಗ್ರಹ ದಳ' ಚುರುಕುಗೊಳಿಸುವ ಬಗ್ಗೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) –**

೮೪೩ (೧೦೬೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ಭಯೋತ್ಪಾದನೆ, ಬಾಂಬ್ ಸ್ಫೋಟದಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಪ್ರಸ್ತುತ ಭಯೋತ್ಪಾದಕ ನಿಗ್ರಹ ದಳ ರಚನೆಯಾಗಿರುವುದು ನಿಜವೇ; ಹಾಗಿದ್ದಲ್ಲಿ ಇದುವರೆವಿಗೆ ಎಷ್ಟು ಪ್ರಕರಣಗಳನ್ನು ಈ ನಿಗ್ರಹದಳ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ; (ಈ ಕುರಿತ ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಭಯೋತ್ಪಾದಕ ಕೃತ್ಯಗಳನ್ನು ಎದುರಿಸುವ ಮತ್ತು ಮುಂಜಾಗೃತ ಕ್ರಮವಾಗಿ ಕೈಗೊಂಡ ಕ್ರಮಗಳು ಏನು? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ವಾಣಿಜ್ಯ ಕಟ್ಟಡಗಳ ಸಂಖ್ಯೆ ಮತ್ತು ಸಂಗ್ರಹ ತೆರಿಗೆ ವ್ಯತ್ಯಾಸ.

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೪ (೧೦೬೨) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ವಾಣಿಜ್ಯ ಮಳಿಗೆಗಳ ಅಂದಾಜು ಸರ್ಕಾರಕ್ಕಿದೆಯೇ; (ಹಾಗಿದ್ದಲ್ಲಿ, ಬಡಾವಣೆವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಕಳೆದ ೩ ವರ್ಷಗಳ ಅವಧಿಯಲ್ಲಿ ಈ ವಾಣಿಜ್ಯ ಮಳಿಗೆಗಳಿಂದ ಬಿ.ಬಿ.ಎಂ.ಪಿ ಸಂಗ್ರಹಿಸಿದ ತೆರಿಗೆ ಹಣ ಎಷ್ಟು; (ವರ್ಷಾವಾರು ಮಾಹಿತಿ ಒದಗಿಸುವುದು)

(ಇ) ವಾಣಿಜ್ಯ ಉದ್ದೇಶಕ್ಕಾಗಿ ಬೆಸ್ಕಾಂನಿಂದ ವಿದ್ಯುತ್ ಸಂಪರ್ಕ ಪಡೆದಿರುವ ಮಳಿಗೆಗಳ ಸಂಖ್ಯೆಗೂ ಮತ್ತು ಬಿ.ಬಿ.ಎಂ.ಪಿಯಿಂದ ವ್ಯಾಪಾರ ಪರವಾನಗಿ ಪಡೆದ ಮಳಿಗೆಗಳ ಸಂಖ್ಯೆಯಲ್ಲಿ ಅಜಗಜಾಂತರ ವ್ಯತ್ಯಾಸವಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನ್ಯೂನತೆಯನ್ನು ನಿವಾರಿಸಿ, ತೆರಿಗೆ ಸಂಗ್ರಹಣೆಯಲ್ಲಿ ಕೈಗೊಂಡ ಕ್ರಮಗಳು ಏನು? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಮರಗಳು ಕಡಿಮೆಯಾಗುತ್ತಿರುವ ಮತ್ತು ಹೊಸ ಗಿಡ ನೆಡುವ ಬಗ್ಗೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೫ (೧೦೬೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ಮಳೆ, ರಸ್ತೆ ವಿಸ್ತರಣೆ ಹಾಗೂ ಇತರ ಅಭಿವೃದ್ಧಿ ಕಾರ್ಯಗಳ ಕಾರಣಗಳಿಂದಾಗಿ ನಷ್ಟವಾದ ಮರಗಳ ಸಂಖ್ಯೆ ಎಷ್ಟು; (ವರ್ಷವಾರು, ಪ್ರದೇಶವಾರು ಪ್ರತ್ಯೇಕವಾದ ವಿವರ ನೀಡುವುದು)

(ಆ) ಇದೇ ಅವಧಿಯಲ್ಲಿ ನೆಡಲಾದ ಒಟ್ಟು ಗಿಡಗಳ ಸಂಖ್ಯೆ ಎಷ್ಟು; (ವರ್ಷವಾರು, ಪ್ರದೇಶವಾರು, ವಿವಿಧ ಸಂಸ್ಥೆವಾರು ಸೇರಿದಂತೆ ಹಾಗೂ ಅವುಗಳಿಗೆ ವ್ಯಯಿಸಲಾದ ಅನುದಾನ ಕುರಿತ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಇತ್ತೀಚಿನ ದಿನಗಳಲ್ಲಿ ಸಣ್ಣ ಮಳೆಗೂ ಸಹ ಮರಗಳು ಮುರಿದು ಬೀಳುತ್ತಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣವಾದ ಅಂಶಗಳು ಯಾವುವು; (ಮಾಹಿತಿ ಒದಗಿಸುವುದು)

(ಈ) ಹೆಚ್ಚಿನ ಅನುದಾನ ವಿನಿಯೋಗ ಹಾಗೂ ಲಕ್ಷಾಂತರ ಗಿಡಗಳನ್ನು ನೆಡಲಾಗುತ್ತಿದೆಯೆಂಬ ಮಾಹಿತಿ ಇದ್ದರೂ ಸಹ ನಗರದ ಮಾಲಿನ್ಯ, ವಾತಾವರಣದ ತಾಪ ಹೆಚ್ಚುತ್ತಲೇ ಸಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕಂಡುಕೊಂಡ ಅಂಶಗಳು ಮತ್ತು ಕ್ರಮಗಳು ಏನು? (ಪೂರ್ಣ ವಿವರ ಒದಗಿಸುವುದು)

## ತೆರಿಗೆ ಪಾವತಿಸದ ಗಣಿ ಮಾಲೀಕರು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೬ (೧೦೬೯) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತೆರಿಗೆ ಪಾವತಿ ಮಾಡದ ಗಣಿ ಮಾಲೀಕರ ಹೆಸರು ಸಮೇತ ವಿವರ ಒದಗಿಸಿ; ಇವರುಗಳು ಎಷ್ಟು ವರ್ಷದಿಂದ ತೆರಿಗೆ ಪಾವತಿಸಿರುವುದಿಲ್ಲ; ವರ್ಷವಾರು ವಿವರ ಹಾಗೂ ಪ್ರತಿಯೊಬ್ಬ ಗಣಿ ಮಾಲೀಕ ಪಾವತಿಸಬೇಕಾದ ಒಟ್ಟು ತೆರಿಗೆ ಮೊತ್ತದ ವಿವರ ಒದಗಿಸುವುದು: (ಸಿ ವರ್ಗ, ಬಿ ವರ್ಗ, ಎ ವರ್ಗ ಸಮೇತ)

(ಆ) ಸರ್ಕಾರ ಇವರುಗಳಿಂದ ತೆರಿಗೆ ವಸೂಲಿ ಮಾಡಲು ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು) ಇಷ್ಟು ವರ್ಷ ತೆರಿಗೆ ಪಾವತಿಸದೇ ಬಾಕಿ ಇರುವವರಿಗೆ ದಂಡ ಸಮೇತ ಅದರ ದುಪ್ಪಟ್ಟು ತೆರಿಗೆ ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದೇ?

## ರಾಜ್ಯದಲ್ಲಿರುವ ಒಟ್ಟು ಇಲಾಖೆಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೭ (೧೦೬೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

ಅ) ರಾಜ್ಯದಲ್ಲಿರುವ ಒಟ್ಟು ಇಲಾಖೆಗಳ ಸಂಖ್ಯೆ ಎಷ್ಟು; (ಅವುಗಳ ವಿವರ ನೀಡುವುದು)

ಆ) ಈ ಇಲಾಖೆಗಳಲ್ಲಿ ಇರಬೇಕಾದ ಹುದ್ದೆಗಳೆಷ್ಟು; ಹಾಲಿ ಖಾಲಿ ಇರುವ ಹುದ್ದೆಗಳೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

## ವಿಧಾನಸೌಧದಲ್ಲಿ ಸಿ.ಸಿ. ಕ್ಯಾಮರದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೮ (೧೦೮೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಧಾನ ಸೌಧದಲ್ಲಿ ಪ್ರತಿಯೊಂದು ಮಹಡಿಗಳಿಗೆ ಸಿ.ಸಿ. ಕ್ಯಾಮರಾ ವ್ಯವಸ್ಥೆಯನ್ನು ಯಾವಾಗ ಎಷ್ಟು ವೆಚ್ಚದಲ್ಲಿ ಮಾಡಲಾಗಿದೆ; ಇದನ್ನು ಯಾವ ಏಜನ್ಸಿಯವರಿಂದ ಮಾಡಿಸಲಾಗಿದೆ;

(ಆ) ಈಗ ಇವುಗಳಲ್ಲಿ ಎಷ್ಟು ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿಲ್ಲ; ನಿರ್ವಹಿಸದಿರುವುದಕ್ಕೆ ಕಾರಣವೇನು; ಇವುಗಳನ್ನು ದುರಸ್ಥಿಗೊಳಿಸದಿರಲು ಕಾರಣವೇನು; ಇದರಿಂದ ಇದುವರೆವಿಗೆ ಏನೇನು ಪ್ರಯೋಜನವಾಗಿದೆ; (ಮಾಹಿತಿ ಒದಗಿಸುವುದು)

## ಕರ್ನಾಟಕ ಪಶು ಸಂಗೋಪನೆ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೯ (೧೧೦೩) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯ ಪರವಾಗಿ ಯಾವುದೇ ಮ್ಯೂಚಯಲ್ ಫಂಡಿನಲ್ಲೂ ಹಣ ವಿನಿಯೋಗಿಸಲು ಸರ್ಕಾರದ ಅನುಮತಿಯಿದೆಯೇ ; ಹಾಗಿದ್ದಲ್ಲಿ, ಈಗ ಕರ್ನಾಟಕ ಪಶು ಸಂಗೋಪನೆ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ, ಬೀದರ್‌ನ ಅಧೀನದಲ್ಲಿ ಬರುವ ದಿ ಇನ್ಸ್‌ಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ವೆಟರ್ನರಿ ಬಯೋಲಾಜಿಕಲ್ಸ್, ಬೆಂಗಳೂರು ಇದರ ನಿರ್ದೇಶಕರು ೨೦೦೭ನೇ ಸಾಲಿನಲ್ಲಿ ೧ ಕೋಟಿ ೩೩ ಲಕ್ಷ ರೂಪಾಯಿಗಳನ್ನು ಯು.ಟಿ.ಐ. ಮ್ಯೂಚಯಲ್ ಫಂಡಿನಲ್ಲಿ ತೊಡಗಿಸಲು ಅಂದಿನ ಸರ್ಕಾರದ ಅನುಮತಿ ಪಡೆದಿರುವರೇ;

(ಆ) ಅನುಮತಿ ಪಡೆದಿದ್ದಲ್ಲಿ, ೨೦೦೭ರಲ್ಲಿ ವಿನಿಯೋಗಿಸಿದ ೧ ಕೋಟಿ ೩೩ ಲಕ್ಷ ರೂಪಾಯಿಗಳ ಮೊತ್ತವು ೨೦೧೨ನೇ ಸಾಲಿನಲ್ಲಿ ವಾಪಸ್ಸು ಪಡೆದಾಗ ದ್ವಿಗುಣವಾಗದೆ ಕೇವಲ ೧ ಕೋಟಿ ೧೦

ಲಕ್ಷ ರೂಪಾಯಿಗಳ ಮಾತ್ರ ಬಂದಿದ್ದು, ಇದರಿಂದಾಗಿ ಸುಮಾರು ೧.೫ ಕೋಟಿ ರೂಪಾಯಿಗಳ ನಷ್ಟಕ್ಕೆ ಈ ಸಂಸ್ಥೆಯು ಆಗಿನ ನಿರ್ದೇಶಕರಿಂದ ಮರುಸಂದಾಯವಾಗಿದೆಯೇ ; ಐ.ಎ.ಹೆಚ್ ಅಂಡ್ ವಿ.ಬಿ., ಬೆಂಗಳೂರು ಸಂಸ್ಥೆಯಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳ ಉಪಕರಣ ಖರೀದಿಗೆ ಸರ್ಕಾರದ ಅನುಮತಿ ಪಡೆಯಲಾಗಿದೆಯೇ ;

(ಇ) ಇದೇ ಇಲಾಖೆಯ ಅಗತ್ಯ ಇರುವ ಉಪಕರಣಗಳ ಖರೀದಿಯಲ್ಲಿ ಅವ್ಯವಹಾರವಾಗಿದೆಯೆಂದು ಸಿ.ಎ.ಜಿ. ೨೦೧೪ರ ವರದಿಯ ಅವಧಿಯಲ್ಲಿ ಉಲ್ಲೇಖಿಸಲಾಗಿದ್ದು, ಇದಕ್ಕೆ ಹೊಣೆಗಾರರಾಗಿರುವ ಆಗಿನ ನಿರ್ದೇಶಕರ ಮೇಲೆ ಏನು ಕ್ರಮ ಜರುಗಿಸಲಾಗಿದೆ ; ಇಲ್ಲಿಯವರೆಗೆ ಆದಂತಹ ಅವ್ಯವಹಾರ ಮತ್ತು ನಷ್ಟಗಳ ವಾಪಸ್ಸಾತಿಗೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರ ಕ್ರಮ ಜರುಗಿಸಲಾಗುವುದೆ ?

## ರಾಜ್ಯದಲ್ಲಿ ಸರಗಳ್ಳತನ ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೫೦ (೧೦೬೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರಗಳ್ಳತನ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದುವರೆವಿಗೂ ಯಾವ ಯಾವ ಜಿಲ್ಲೆಗಳಲ್ಲಿ ಸರಗಳ್ಳತನ ಹೆಚ್ಚು ಆಗಿರುತ್ತಿದೆ; (ಮಾಹಿತಿ ನೀಡುವುದು)

(ಇ) ಜಿಲ್ಲೆಗಳಲ್ಲಿ ಸರಗಳ್ಳತನ ತಡೆಯಲು ಜಿಲ್ಲಾ ಪೊಲೀಸ್ ವರಿಷ್ಠರು ಕೈಗೊಂಡ ಕ್ರಮಗಳೇನು?

## ಬಂಧೀಖಾನೆಗಳ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೫೧ (೧೦೬೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಬಂಧೀಖಾನೆಗಳ ಸಂಖ್ಯೆ ಎಷ್ಟು;

(ಆ) ಕೆಲವು ಬಂಧೀಖಾನೆಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಖೈದಿಗಳಿಗೆ ಆಧ್ಯಾತ್ಮಿಕ ಅರಿವು ಮೂಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಮದ್ಯ ಮಾರಾಟ ಮತ್ತು ಪರವಾನಗಿ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೫೨ (೧೦೬೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಾರಾಯಿ ಮಾರಾಟ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ಇದಕ್ಕೆ ಕಾರಣಗಳೇನು;

(ಆ) ಹಳ್ಳಿಗಳಲ್ಲಿ ಲೈಸೆನ್ಸ್ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದರಿಂದ ಹೊಸದಾಗಿ ಲೈಸೆನ್ಸ್ (ಪರವಾನಗಿ)ಗಳನ್ನು ನೀಡಲು ಸರ್ಕಾರ ಮುಂದಾಗಿದೆಯೇ; ಹಾಗಿದ್ದಲ್ಲಿ, ಯಾವಾಗಿನಿಂದ ಪರವಾನಗಿ ನೀಡಲಾಗುವುದು, ಇದಕ್ಕೆ ಅನುಸರಿಸುವ ಮಾನದಂಡಗಳೇನು;

(ಇ) ಲೈಸೆನ್ಸ್ ಕೊಡಲು ಸರ್ಕಾರ ಉದ್ದೇಶಿಸಿರುವ ಕಾರಣ ಇದು ಮದ್ಯದ ಲಾಬಿಗೆ ಮಣಿದಿದೆ ಎಂಬ ಆರೋಪದ ಬಗ್ಗೆ ಸರ್ಕಾರದ ನಿಲುವೇನು; ಸ್ಪಷ್ಟಪಡಿಸುವುದು;

(ಈ) ಇದರ ಜೊತೆಯಲ್ಲಿ ತೆಂಗಿನ ನೀರಾ ಇಳಿಸಲು ಸಹ ಅವಕಾಶ ಮಾಡಿಕೊಡದಿರಲು ಕಾರಣಗಳೇನು; ಇದಕ್ಕೆ ಬೇಕಾದ ಪ್ರಸ್ತಾವಿತ ಯೋಜನೆಯನ್ನು ಸರ್ಕಾರ ತಯಾರಿಸಿದೆಯೇ; ವಿವರಗಳನ್ನು ನೀಡುವುದು;

(ಉ) ಇದರಿಂದಾಗಿ ತೆಂಗು ಬೆಳೆಗಾರರಿಗೆ ಆದ್ಯತೆ ನೀಡುವುದರ ಜೊತೆಗೆ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬಹುದೇ (ವಿವರ ಒದಗಿಸುವುದು)

## ಕುಡಿಯುವ ನೀರಿನ ೨೪/೭ ಸಮಗ್ರ ಯೋಜನೆ ಕುರಿತು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)** –

೮೫೩ (೧೧೩೫) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ೨೪/೭ ಸಮಗ್ರ ಯೋಜನೆಯನ್ನು ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಮತ್ತು ಎಲ್ಲಿಯವರೆಗೆ ಕಾರ್ಯರೂಪಕ್ಕೆ ತರಲಾಗುತ್ತಿದೆ; ಹಾಗೂ ಈ ಯೋಜನೆಗಾಗಿ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಯೋಜನೆವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ ಈ ಯೋಜನೆಯಲ್ಲಿ ಯಾವ ವಾರ್ಡ್‌ಗಳು ಎಷ್ಟು ಪ್ರಮಾಣದ ಕಾಮಗಾರಿಗಳನ್ನು ಕೈಗೊಂಡಿದೆ; ವಾರ್ಡ್‌ಗಳ ಸಂಖ್ಯೆ ಮತ್ತು ಕಾಮಗಾರಿವಾರು ತಗಲಿದ ವೆಚ್ಚದ ಮಾಹಿತಿ ನೀಡುವುದು;

(ಇ) ಪ್ರಸ್ತುತ ಈ ಯೋಜನೆಗಳ ಪ್ರಗತಿ ಯಾವ ಹಂತದಲ್ಲಿದೆ; ಅವುಗಳ ಸ್ಥಿತಿಗತಿಗಳೇನು? (ವಿವರ ನೀಡುವುದು)

## ಬೀದರ್ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೫೪ (೧೦೬೮) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಅಭಿವೃದ್ಧಿ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದಾಗಿನಿಂದ ಇಲ್ಲಿಯವರೆಗೂ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು;

(ಆ) ಈ ಅನುದಾನದಲ್ಲಿ ಖರ್ಚು ಮಾಡಲಾಗಿರುವ ಅನುದಾನವೆಷ್ಟು; ಬಾಕಿ ಉಳಿದಿರುವ ಅನುದಾನವೆಷ್ಟು;

(ಇ) ಇದುವರೆವಿಗೂ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಹಾಗೂ ಕೈಗೆತ್ತಿಕೊಳ್ಳದೆ ಇರುವ ಕಾಮಗಾರಿಗಳು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಬೀದರ್ ಅಭಿವೃದ್ಧಿ ಪ್ರಾಧಿಕಾರದ ಅಪೂರ್ಣಗೊಂಡಿರುವ ಕಾಮಗಾರಿಗಳು ಸಂಪೂರ್ಣವಾಗಿ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

## ಸಿಂಧುತ್ವ ಪ್ರಮಾಣ ಪತ್ರದ ತಾರತಮ್ಯ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೫೫ (೧೦೯೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರಿ ನೌಕರರು ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಕೊಟ್ಟ ನಂತರ ಸೇವೆಗೆ ಸೇರಿ; ನಂತರ ಇಲಾಖೆಯ ಅನುಮತಿಯನ್ನು ಪಡೆದುಕೊಂಡು ಉನ್ನತ ಹುದ್ದೆಗೆ ಆಯ್ಕೆಯಾದಲ್ಲಿ ಅದೇ ಮೀಸಲಾತಿಯಡಿಯಲ್ಲಿ ಆಯ್ಕೆಯಾದರೆ, ಅಭ್ಯರ್ಥಿಯು ಈ ಹಿಂದೆ ಕೊಟ್ಟ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದೇ;

(ಆ) ಹಾಗಿದ್ದಲ್ಲಿ ಪುನಃ ಹೊಸದಾಗಿ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನೇಮಕಾತಿ ಪ್ರಾಧಿಕಾರಕ್ಕೆ ವಿತರಿಸಬೇಕಾಗುತ್ತದೆಯೇ;

(ಇ) ಈ ಹಿಂದೆ ನೇಮಕಾತಿಯಾದ ಪ್ರಾಧಿಕಾರದಿಂದ ಆ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲಾಗುವುದೇ? (ಸಂಪೂರ್ಣ ವಿವರ ಒದಗಿಸುವುದು)

## ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳ ಅನುಷ್ಠಾನದ ಬಗ್ಗೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೫೬ (೧೦೯೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೫-೧೬ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳ ಸಂಖ್ಯೆ ಎಷ್ಟು; (ಇಲಾಖಾವಾರು ವಿವರ ನೀಡುವುದು)

(ಆ) ಸದರಿ ಆಯವ್ಯಯದಲ್ಲಿ ಘೋಷಣೆಯಾದ ಯೋಜನೆಗಳಲ್ಲಿ ಜಾರಿಯಾದ ಮತ್ತು ಹೊರಡಿಸಲಾದ ಸರ್ಕಾರಿ ಆದೇಶಗಳು ಯಾವುವು; (ಇಲಾಖಾವಾರು ವಿವರ ನೀಡುವುದು)

(ಇ) ಘೋಷಣೆಯಾದ ಯೋಜನೆಗಳ ಪೈಕಿ ಜಾರಿಗೆ ಬಾರದೆ ಹಾಗೆ ಬಾಕಿ ಇರುವ ಯೋಜನೆಗಳ ಸಂಖ್ಯೆ ಎಷ್ಟು; ಅನುಷ್ಠಾನಗೊಳಿಸದೆ ಇರಲು ಕಾರಣಗಳೇನು? (ಇಲಾಖಾವಾರು ವಿವರ ನೀಡುವುದು)

## ಮೈಲಾರ ಮಲ್ಲಣ್ಣಾ ದೇವಸ್ಥಾನ ಅಭಿವೃದ್ಧಿ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)** –

೮೫೭ (೧೯೨) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಪುರಾತನ ಮೈಲಾರ ಮಲ್ಲಣ್ಣಾ ದೇವಸ್ಥಾನಕ್ಕೆ ಬಿಡುಗಡೆಯಾದ ಹಣವೆಷ್ಟು; ಹಾಗೆ ಈ ದೇವಸ್ಥಾನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯವು ಸರಿಯಾಗಿ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ದೇವಸ್ಥಾನದ ಜೀರ್ಣೋದ್ಧಾರದ ಕಾಮಗಾರಿಯು ಅರ್ಧಕ್ಕೆ ನಿಂತಿರಲು ಕಾರಣಗಳೇನು; (ವಿವರ ನೀಡುವುದು)

(ಇ) ನಿಂತಿರುವ ದೇವಸ್ಥಾನದ ಅಭಿವೃದ್ಧಿಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಹಾಗೆಯೇ ದೇವಸ್ಥಾನದ ಸುತ್ತಲೂ ಕೂಡಲೇ ರಸ್ತೆ ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸುವುದು ಯಾವಾಗ? (ವಿವರ ನೀಡುವುದು)

## ಬೆಳಗಾವಿಯಲ್ಲಿ "ಖೋವಾ ಉತ್ಪಾದನಾ ಘಟಕ" ಸ್ಥಾಪನೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೮೫೮ (೧೦೭೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಹಾಲಿನ ಉತ್ಪನ್ನಗಳಾದ ಕುಂದಾ, ಪೇಡಾ, ಕಲಾಕಂದ, ಶ್ರೀಕಂಡ, ಅಮ್ರಕಂಡ ಮುಂತಾದ ಸಿಹಿ ಆಹಾರ ಪದಾರ್ಥಗಳನ್ನು ತಯಾರಿಸುವ ಸಲುವಾಗಿ ಖೋವಾ ಉತ್ಪಾದನಾ ಘಟಕವನ್ನು ಹಾಗೂ ಕ್ಷೀರಭಾಗ್ಯ ಯೋಜನೆಗಳಿಗಾಗಿ ಹಾಲಿನ ಪುಡಿ ಪ್ಯಾಕಿಂಗ್ ಘಟಕಗಳನ್ನು ಸ್ಥಾಪಿಸಲು, ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆಯೇ ;

(ಆ) ಸಲ್ಲಿಸಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು :

(ಇ) ಬೆಳಗಾವಿ ಭಾಗದ ಹೈನುಗಾರರ ಅಭಿವೃದ್ಧಿಗಾಗಿ ಈ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಚಿಂತಿಸುವುದೇ ?

## ಬೆಂಗಳೂರಿನ ಪಾದಚಾರಿಗಳಿಗಾಗಿ ಸ್ಕೈವಾಕ್

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೮೫೯ (೧೦೭೧) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನಲ್ಲಿ ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚಳವಾಗುತ್ತಿರುವುದು ನಗರದ ಮುಖ್ಯ ರಸ್ತೆಗಳು, ಹೆದ್ದಾರಿಗಳು, ಮತ್ತಿತರೆ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಳವಾಗಿ ಪಾದಚಾರಿಗಳು ರಸ್ತೆಗಳನ್ನು ದಾಟಲು ಕಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸ್ಕೈವಾಕ್ ಮತ್ತು ಅಂಡರ್ ವಾಕ್‌ಗಳು ಹಾಲಿ ಎಷ್ಟಿವೆ ಮತ್ತು ಎಷ್ಟು ಬೇಡಿಕೆಯಿವೆ;

(ಇ) ಪಾದಚಾರಿಗಳ ಹಿತದೃಷ್ಟಿಯಿಂದ ಬೇಡಿಕೆಗಳನ್ನು ಪೂರೈಸಲು ಹೆಚ್ಚುವರಿಯಾಗಿ ಸ್ಕೈವಾಕ್ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸ್ಥಳಗಳ ವಿವರಗಳನ್ನು ಒದಗಿಸುವುದು)

## ಬಿ.ಬಿ.ಎಂ.ಪಿ ವ್ಯಾಪ್ತಿಯ ವಾರ್ಡ್ ನಂ ೧೦೯ರಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ನಿರ್ಮಾಣ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೮೬೦ (೧೧೪೧) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

ಅ) ಬಿ.ಬಿ.ಎಂ.ಪಿ ವ್ಯಾಪ್ತಿಯ ಚಿಕ್ಕಪೇಟೆ ಓ.ಟಿ.ಸಿ. ರಸ್ತೆ ನಂ.೨೦೨, ೨೦೩, ೨೦೩/೧, ವಾರ್ಡ್ ನಂ.೧೦೯, ಬಹು ಹಗರಣದ ವಾಣಿಜ್ಯ ಕಟ್ಟಡ ಒತ್ತುವರಿ ಮಾಡಿಕೊಂಡು, ನ್ಯಾಯಾಂಗ ನಿಂದನೆ ಮತ್ತು ಎಲ್ಲಾ ಕೆ.ಎಂ.ಸಿ ಮತ್ತು ಮೂರು ನಕ್ಷೆಗಳಿಗೆ ಮಂಜೂರಾತಿಯನ್ನು ಪಡೆದು ಕಾನೂನಿಗೆ ವಿರುದ್ಧವಾಗಿ ಒಂದೇ ಕಟ್ಟಡವನ್ನು ಬಿ.ಬಿ.ಎಂ.ಪಿ ಯ ನೇರ ಅಡಿಯಲ್ಲಿ ತಲೆ ಎತ್ತಿರುವುದು ನಿಜವೇ; ಹಾಗಿದ್ದಲ್ಲಿ, ಬಿ.ಎಂ.ಟಿ.ಎಫ್ ನಿಂದ ತೆಗೆದುಕೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)

ಆ) ಎಫ್.ಐ.ಆರ್ ಕ್ರೈಂ ನಂ.೧೭೬/೨೦೧೨ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಘನ ಉಚ್ಚ ನ್ಯಾಯಾಲಯದ ಕ್ರಿಮಿನಲ್ ಪಿಟಿಷನ್ ಸಂಖ್ಯೆ:೬೦೫೦/೨೦೧೨, ಕ್ರಿಮಿನಲ್ ಪಿಟಿಷನ್ ಸಂಖ್ಯೆ:೫೩೪೦/೨೦೧೨ ದಿನಾಂಕ:೧೦.೧೦.೨೦೧೩ರ ಆದೇಶದ ಪ್ರಕಾರ ಬಿ.ಎಂ.ಟಿ.ಎಫ್ ರವರಿಗೆ ಒತ್ತುವರಿ ಮತ್ತು ಕಂದಾಯ ವಂಚನೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಎಲ್ಲಾ ಕಡತಗಳ ವಾದಿ ಮತ್ತು ಪ್ರತಿವಾದಿಗಳ ವಿವರಗಳನ್ನು ಒದಗಿಸುವುದು)

ಇ) ಹಾಗಾದರೇ, ಮಾನ್ಯ ಮುಖ್ಯಮಂತ್ರಿಗಳ ಪತ್ರ ಸಂಖ್ಯೆ:ಸಿಎಂ.ಜನರಲ್/೫೪೦೮/ಜಿ. ದಿನಾಂಕ:೨೦.೦೫.೨೦೧೪ರ ಮೇಲೆ ಸೂಕ್ತ ಕ್ರಮ ಜರುಗಿಸಿದ್ದಾರೆಯೇ; ಕ್ರಮ ಜರುಗಿಸಿದಿದ್ದರೆ, ಸರ್ಕಾರದ ಸ್ವತ್ತನ್ನು ಮತ್ತು ತೆರಿಗೆ ವಂಚನೆಯವರ ಮೇಲೆ ಕ್ರಮ ಜರುಗಿಸಲಾಗಿದೆಯೆ; ಬಿ.ಬಿ.ಎಂ.ಪಿ ಮತ್ತು ಮಾಲೀಕರ ಜೊತೆ ಶಾಮೀಲಾಗಿ ಸರ್ಕಾರಕ್ಕೆ ವಂಚಿಸುತ್ತಿರುವುದು ನಿಜವೇ; ಕಾನೂನು ಪ್ರಕಾರ ಸರ್ಕಾರ ಸೂಕ್ತ ಕ್ರಮವನ್ನು ಜರುಗಿಸಲಾಗುವುದೆ; (ಇದರ ಬಗ್ಗೆ ಸಂಪೂರ್ಣ ಮಾಹಿತಿ ಕೊಡುವುದು)

ಈ) ಬಿಎಂಟಿಎಫ್ ಯಿಂದ ಫ್ಯಾಕ್ಚುಲ್ ಫೋಟೋಗಳ ಅಳತೆ ಮತ್ತು ಮಳಿಗೆಗಳ ಈಗಿನ ಸ್ಥಿತಿಯೇನು;

ಉ) ಮೇಲ್ಕಂಡ ಎಲ್ಲಾ ಅಂಶಗಳ ಅಡಿಯಲ್ಲಿ ಈ ಬಹು ಹಗರಣದ ಬಗ್ಗೆ ಸಾರ್ವಜನಿಕರ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಉನ್ನತ ಮಟ್ಟದ ತನಿಖೆಗೆ ಒಳಪಡಿಸಲಾಗುವುದೇ?

**ಶಿಶುಪಾಲನ ರಜೆ (Child care leave) ಬಗ್ಗೆ.**

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೮೬೧ (೧೪೬೫) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮ ೧೩೫ಸಿ ಪ್ರಕಾರ ಸರ್ಕಾರಿ ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ Child care leave ಎಂದಿನಿಂದ ಜಾರಿಗೆ ಬಂದಿದೆ; ಈ ರಜೆಯ ಸ್ಪಷ್ಟ ಉದ್ದೇಶವೇನು; (ಆದೇಶದ ಪ್ರತಿ ನೀಡುವುದು)

(ಆ) ಮಹಿಳಾ ನೌಕರರಿಗೆ ಸದರಿ ರಜೆಯನ್ನು ಮಂಜೂರು ಮಾಡಲು ಮೇಲಾಧಿಕಾರಿಗಳು ವಿನಾಕಾರಣ ತೊಂದರೆ ನೀಡುತ್ತಿರುವುದು ಹಾಗೂ ನಿರಾಕರಿಸುತ್ತಿರುವುದರಿಂದ ಮಹಿಳಾ ನೌಕರರು ಮಾನಸಿಕವಾಗಿ ನೋವಿಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಮಹಿಳಾ ನೌಕರರಿಗೆ ಸದರಿ ರಜೆಯನ್ನು ಕಡ್ಡಾಯವಾಗಿ ಮಂಜೂರು ಮಾಡುವಂತೆ ಇಲಾಖಾ ಮುಖ್ಯಸ್ಥರುಗಳಿಗೆ ಸೂಚನೆ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ;

(ಈ) ಮಹಿಳಾ ನೌಕರರಿಗೆ ಸದರಿ ರಜೆಯನ್ನು ನೀಡಲು ಮೇಲಾಧಿಕಾರಿಗಳು ನಿರಾಕರಿಸಿರುವ ಬಗ್ಗೆ ದೂರುಗಳೇನಾದರೂ ಬಂದಿದೆಯೇ; ದೂರುಗಳು ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುವುದು?

## ಬೆಳಗಾವಿ ನಗರದಲ್ಲಿ ರಿಂಗ್ ರೋಡ್

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ) –**

೮೬೨ (೧೦೭೬) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ನಗರದ ಸಂಚಾರ ಸುಧಾರಣೆ ಮತ್ತು ನಗರದ ಬೆಳವಣಿಗೆಗಾಗಿ ರಿಂಗ್ ರೋಡ್ ಮತ್ತು ಫ್ಲೈಓವರ್‌ಗಳು ತುರ್ತಾಗಿ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಯಾವ್ಯಾವ ಪ್ರಸ್ತಾವನೆಗಳು ಹಾಲಿ ಸರ್ಕಾರದ ಮುಂದಿವೆ ಮತ್ತು ಇನ್ನು ಯಾವ ಯಾವ ಪ್ರಸ್ತಾವನೆಗಳನ್ನು ಸಿದ್ಧಪಡಿಸುವ ಚಿಂತನೆ ಸರ್ಕಾರದ ಮುಂದಿದೆ; ಪ್ರತಿ ಯೋಜನೆಗಳ ಅಂದಾಜು ವೆಚ್ಚಗಳೆಷ್ಟು;

(ಇ) ಯಾವ ಅವಧಿಯೊಳಗೆ ಬೆಳಗಾವಿ ನಗರಕ್ಕೆ ಅಗತ್ಯವಿರುವ ರಿಂಗ್ ರೋಡ್ ಮತ್ತು ಫ್ಲೈಓವರ್‌ಗಳು ನಿರ್ಮಾಣಗೊಳ್ಳುವುವು?

## ಉತ್ತರ ಕರ್ನಾಟಕದಲ್ಲಿ ಮೊಸರು, ಪನ್ನೀರ್ ಘಟಕ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ) –**

೮೬೩ (೧೦೭೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸ್ಥಳೀಯವಾಗಿ ಬೇಡಿಕೆಯಿರುವ ಮೊಸರು, ಪನ್ನೀರ್ ಮತ್ತೀತರೆ ಆಹಾರ ಪದಾರ್ಥಗಳ ಉತ್ಪಾದನೆಯನ್ನು ಮಾಡಿ, ಮಾರಾಟ ಮಾಡುವ ಸಲುವಾಗಿ 'ಕಪ್ ಮೊಸರು ತಯಾರಿಕಾ ಘಟಕ' 'ಪನ್ನೀರ್ ಉತ್ಪಾದನಾ ಘಟಕ' ಮತ್ತು ಪ್ಲಾಸ್ಟಿಕ್ ಕಪ್ ತಯಾರಿಕಾ ಘಟಕ'ಗಳನ್ನು ಸ್ಥಾಪಿಸಲು, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಸರ್ಕಾರದ ಮುಂದೆ ಪ್ರಸ್ತಾವಗಳನ್ನು ಸಲ್ಲಿಸಿದೆಯೇ;

(ಆ) ಸಲ್ಲಿಸಿದ್ದಲ್ಲಿ, ಕೈಗೊಂಡ ಕ್ರಮಗಳೇನು;

(ಇ) ಇಲ್ಲವಾದಲ್ಲಿ, ಹೈನುಗಾರಿಕೆಯಲ್ಲಿರುವ ರೈತರ ಹಿತದೃಷ್ಟಿಯಿಂದ ಈ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಚಿಂತಿಸುವುದೇ?

## ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಪರಭಾರೆ ಮಾಡಿರುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) –**

೮೬೪ (೧೧೦೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸ್ಯಾಂಕಿ ಕೆರೆಗೆ ಹೊಂದಿಕೊಂಡಂತೆ ಇರುವ ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಖಾಸಗಿಯವರಿಗೆ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರಿ ಜಾಗವನ್ನು ಖಾಸಗಿಯವರಿಗೆ ಪರಭಾರೆ ಮಾಡಲು ಕಾರಣಗಳೇನು ಮತ್ತು ಯಾವಾಗ ಖಾಸಗಿಯವರಿಗೆ ನೀಡಲಾಯಿತು ; ವಿವರ ನೀಡುವುದು ;

(ಇ) ಸದರಿ ಜಾಗಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ನೀಡಿರುವ ತೀರ್ಪು ಏನು ; ಸಂಪೂರ್ಣ ವಿವರ ನೀಡುವುದು ;

(ಈ) ಪರಭಾರೆಯಾದ ಜಾಗವನ್ನು ಹಿಂಪಡೆಯಲು ರಾಜ್ಯ ಸರ್ಕಾರವು ಯಾವ ಯಾವ ಪ್ರಯತ್ನಗಳನ್ನು ನಡೆಸುತ್ತಿದೆ ? (ವಿವರ ನೀಡುವುದು)

## ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಡೆದಿರುವ ಕೊಲೆ/ಸುಲಿಗೆ/ಕಳ್ಳತನದ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) –**

೮೬೫ (೧೦೮೦) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಡೆದ ಕೊಲೆ, ಕಳ್ಳತನ, ಸುಲಿಗೆ ಪ್ರಕರಣಗಳು ಎಷ್ಟು; (ಪೂರ್ಣ ವಿವರ ನೀಡುವುದು)

(ಆ) ಇವುಗಳಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

(ಇ) ಪತ್ತೆ ಹಚ್ಚಲಾಗದೆ ಉಳಿದಿರುವ ಪ್ರಕರಣಗಳು ಎಷ್ಟು: (ಅವುಗಳ ಪೂರ್ಣ ವಿವರ ನೀಡುವುದು)

(ಈ) ಪ್ರಕರಣಗಳನ್ನು ಪತ್ತೆ ಹಚ್ಚಲು ವಿನೂತನವಾದ ಮೊಬೈಲ್ ಟ್ರ್ಯಾಕಿಂಗ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆಯೇ;

(ಉ) ಹಾಗಿದ್ದಲ್ಲಿ, ಮೊಬೈಲ್ ಟ್ರ್ಯಾಕಿಂಗ್ ತಂತ್ರಜ್ಞಾನವನ್ನು ಬಳಸಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ? (ಪ್ರಕರಣಗಳ ಮಾಹಿತಿ, ವಿವರ ನೀಡುವುದು)

## ಸರಗಳ್ಳತನ ತಡೆಯುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ** (**ನಾಮನಿರ್ದೇಶನ ಹೊಂದಿದವರು**) –

೮೬೬ (೧೦೮೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಸರಗಳ್ಳತನ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ೨೦೧೨ರಿಂದ ಈವರೆವಿಗೆ ಸರಗಳ್ಳತನ ನಡೆದಿರುವ ಬಗ್ಗೆ ದಾಖಲಾಗಿರುವ ಪ್ರಕರಣಗಳೆಷ್ಟು; (ವರ್ಷವಾರು ವಿವರವನ್ನು ಒದಗಿಸುವುದು)

(ಇ) ಈ ಸಂಬಂಧ ಇದುವರೆವಿಗೆ ಪತ್ತೆ ಹಚ್ಚಲಾಗಿರುವ ಪ್ರಕರಣಗಳೆಷ್ಟು;

(ಈ) ಸರ್ಕಾರವು ಸರಗಳ್ಳತನವನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು?

## ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇದಿಸುವುದು

**ಶ್ರೀ ಲಹರ್ ಸಿಂಗ್ ಸಿರೋಯಾ** (**ನಾಮನಿರ್ದೇಶನ ಹೊಂದಿದವರು**) –

೮೬೭ (೧೦೮೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿನ ಕಸದ ಸಮಸ್ಯೆ ಪರಿಹರಿಸಲು ಪ್ಲಾಸ್ಟಿಕ್‌ಗೆ ನಿಷೇಧ ಏರುವುದಾಗಿ ಸರ್ಕಾರವು ಘೋಷಿಸಿದ್ದು ನಿಜವೇ;

(ಆ) ಹಾಗಿದ್ದರೆ, ಇದುವರೆವಿಗೂ ಪ್ಲಾಸ್ಟಿಕ್‌ಗೆ ನಿಷೇಧ ಏರುವ ಬಗ್ಗೆ ಅಧಿಕೃತವಾದ ಆದೇಶ ಹೊರ ಬೀಳದೆ ಇರಲು ಕಾರಣಗಳೇನು;

(ಇ) ಪ್ಲಾಸ್ಟಿಕ್‌ಗೆ ನಿಷೇಧ ಜಾರಿಗೊಳಿಸಲು ಸರ್ಕಾರಕ್ಕೆ ಎದುರಾಗಿರುವ ಸವಾಲುಗಳೇನು; (ಸಂಪೂರ್ಣ ವಿವರ ನೀಡುವುದು)

(ಈ) ಬೆಂಗಳೂರು ನಗರದಲ್ಲಿ ಯಾವಾಗ ಪ್ಲಾಸ್ಟಿಕ್‌ಗೆ ನಿಷೇಧ ಏರಲಾಗುವುದು?

## ಟೆಂಡರ್ ಶ್ಯೂರ್ ಯೋಜನೆಯಡಿ ಫುಟ್‌ಪಾತ್ ವಿಸ್ತರಿಸುವುದು

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) –**

೮೬೮ (೧೦೮೨) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಯಾವ ಯಾವ ರಸ್ತೆಗಳಲ್ಲಿ ಯೋಜನೆಯಡಿ Tender Sure ಫುಟ್‌ಪಾತ್ ವಿಸ್ತರಿಸುವ (ಅಗಲೀಕರಿಸುವ) ಕಾಮಗಾರಿ ಪ್ರಾರಂಭಿಸಲಾಗಿದೆ;

(ಆ) ಫುಟ್‌ಪಾತ್‌ಗಳನ್ನು ವಿಸ್ತರಿಸುವ ನೆಪದಲ್ಲಿ ಸಾರ್ವಜನಿಕ ರಸ್ತೆಗಳು ಕಿರಿದಾಗಿ ವಾಹನಗಳು ಓಡಾಡಲು ಕಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸಾರ್ವಜನಿಕ ರಸ್ತೆಗಳಲ್ಲಿ ವಾಹನಗಳು ಸರಾಗವಾಗಿ ಓಡಾಡಲು ಅನುಕೂಲವಾಗುವಂತೆ ಫುಟ್‌ಪಾತ್‌ಗಳನ್ನು ವಿಸ್ತರಿಸಲು ಸರ್ಕಾರವು ಮುಂದಾಗುವುದೆ;

(ಈ) ಈ ಕಾಮಗಾರಿಗಾಗಿ ಎಷ್ಟು ಹಣ ವೆಚ್ಚ ಮಾಡಲಾಗುತ್ತಿದೆ?

## ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬೯ (೧೦೯೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚೆಗೆ ಪ್ರತಿ ಜಿಲ್ಲಾ ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚುತ್ತಿದ್ದು, ಈ ವಾಹನಗಳ ಸಂಖ್ಯೆಯನ್ನು ನಿಯಂತ್ರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

(ಆ) ವಾಹನ ಸಂದಣಿ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಾಯು ಮಾಲಿನ್ಯ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ತಡೆಗಟ್ಟಲು ಕೈಗೊಂಡ ಕ್ರಮವೇನು;

(ಇ) ಈ ವಾಯು ಮಾಲಿನ್ಯದಿಂದ ಸಂಚಾರಿ ಪೊಲೀಸರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ಮಂದಿ ಸಂಚಾರಿ ಪೊಲೀಸರು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದಾರೆ ? (ವಿವರ ನೀಡುವುದು)

## ಮರಳು ದಂಧೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೦ (೧೦೮೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮರಳು ದಂದೆ ಹವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದಲ್ಲಿ ಮರಳು ನೀತಿ ಜಾರಿಯಲ್ಲಿದ್ದರೂ. ಮರಳು ದಂದೆಕೋರರ ಹಾವಳಿ ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮರಳು ಇಲ್ಲದೆ, ಸರ್ಕಾರಿ ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಮರಳು ನೀತಿಯಿಂದ ಸಾರ್ವಜನಿಕರು ದುಪ್ಪಟ್ಟು ಹಣ ಕೊಟ್ಟು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಡೆಸುತ್ತಿರುವ ಆಸ್ಪತ್ರೆಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೧ (೧೯೯೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಈ ಆಸ್ಪತ್ರೆಗಳಿಗೆ ಪಾಲಿಕೆಯ ವಾರ್ಷಿಕ ಆಯವ್ಯಯದಲ್ಲಿ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ;

(ಆ) ಈ ಆಸ್ಪತ್ರೆಗಳಿಗೆ ವಾರ್ಷಿಕ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತದಲ್ಲಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ; (ಕಳೆದ ಮೂರು ವರ್ಷಗಳ ವಿವರ ನೀಡುವುದು)

(ಇ) ವಾರ್ಷಿಕ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತ ಸರಿಯಾದ ರೀತಿಯಲ್ಲಿ ವಿನಿಯೋಗವಾಗದಿದ್ದಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು?

## ಮುಜರಾಯಿ ಇಲಾಖೆ ವತಿಯಿಂದ ೨೦೧೩-೧೪ ಮತ್ತು ೨೦೧೪-೧೫ನೇ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ನೀಡಿರುವ ಹಣದ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೨ (೧೧೯೭) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಮುಜರಾಯಿ ಇಲಾಖೆ ವತಿಯಿಂದ ೨೦೧೩-೧೪ ಮತ್ತು ೨೦೧೪-೧೫ನೇ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಇವುಗಳಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಸೇರಿದ ದೇವಸ್ಥಾನಗಳು ಯಾವುವು ; ಈ ದೇವಸ್ಥಾನಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ?

## ಮುಜರಾಯಿ ಇಲಾಖೆವತಿಯಿಂದ ದೇವಾಲಯಗಳ ಜೀರ್ಣೋದ್ಧಾರಕ್ಕೆ ವಿಧಾನ ಪರಿಷತ್ ಸದಸ್ಯರ ಮನವಿ ಪತ್ರಗಳನ್ನು ಪುರಸ್ಕರಿಸುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೩ (೧೧೯೯) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಧಾನ ಪರಿಷತ್ ಸದಸ್ಯರು ನೀಡುವ ಪತ್ರಗಳಿಗೆ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಅನುದಾನ ನೀಡಲಾಗುವುದು ಎಂದು ಸದನದಲ್ಲಿ ಹಿಂದಿನ ಮುಜರಾಯಿ ಇಲಾಖೆ ಸಚಿವರು ಭರವಸೆ ನೀಡಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಯಾವ ಯಾವ ವಿಧಾನ ಪರಿಷತ್ ಸದಸ್ಯರ ಕೋರಿಕೆಗೆ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?

## ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಮಾಹಿತಿ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೪ (೧೧೦೦) ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಯಾವುವು ; ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹೊಂದಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಯಾವುವು ಮತ್ತು ಎಲ್ಲೆಲ್ಲಿ ಅಸ್ತಿತ್ವದಲ್ಲಿವೆ ? (ಜಿಲ್ಲಾವಾರು ಹೆಸರು ಮತ್ತು ವಿಳಾಸ ನೀಡುವುದು)

## ಎಸ್.ಸಿ.ಪಿ. ಯೋಜನೆ ಅಡಿಯಲ್ಲಿ ಎಸ್.ಸಿ/ಎಸ್.ಟಿ.ಯವರಿಗೆ ನೀಡುತ್ತಿರುವ ಸೌಲಭ್ಯದ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೫ (೧೧೦೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೇಷ್ಮೆ ಇಲಾಖೆಯಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನೀಡಲಾಗುತ್ತಿರುವ ಹಣ ಡಿಸೆಂಬರ್ ನಂತರ ಬಿಡುಗಡೆಯಾಗುತ್ತಿದ್ದು, ಈ ಹಣ ಮಾರ್ಚ್ ಅಂತ್ಯದವರೆಗೆ ಖರ್ಚಾಗದೇ ಉಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ನೀಡುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ ;

(ಇ) ವಿಶೇಷ ಘಟಕ ಯೋಜನೆಯಡಿಯಲ್ಲಿ ಹಣ ಬಿಡುಗಡೆ ಮಾಡುವುದನ್ನು ವರ್ಷದ ಆರಂಭದಲ್ಲಿ ಬಿಡುಗಡೆ ಮಾಡಲು ಇರುವ ತೊಂದರೆ ಏನು ?

## ಮುಜರಾಯಿ ದೇವಸ್ಥಾನಗಳಲ್ಲಿನ ಆಸ್ತಿ ಆಭರಣಗಳನ್ನು ರಕ್ಷಿಸುವ ಕುರಿತು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭೬ (೧೮೯೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಸಂಖ್ಯೆ ಎಷ್ಟು ; ಶ್ರೇಣಿವಾರು ವಿವರ ನೀಡುವುದು ; ಅವುಗಳಿಗೆ ಸೇರಿದ ಆಸ್ತಿ ಪ್ರಮಾಣ ಎಷ್ಟು ; ಭೂಮಿ, ಒಡವೆ ಹಾಗೂ ಇನ್ನಿತರ ವಿವರಗಳನ್ನೊಳಗೊಂಡ ದೇವಾಲಯವಾರು ಪ್ರತ್ಯೇಕ ಮಾಹಿತಿ ನೀಡುವುದು ;

(ಆ) ಈ ದೇವಾಲಯಗಳ ಅರ್ಚಕರಿಗೆ ನೀಡುತ್ತಿರುವ ಸಂಭಾವನೆ ಮತ್ತು ವೇತನದ ವಿವರಗಳನ್ನು ಒದಗಿಸುವುದು ;

(ಇ) ಮುಜರಾಯಿ ದೇವಾಲಯಗಳಿಗೆ ಸೇರಿದ ಎಷ್ಟು ಪ್ರಮಾಣದ ಭೂಮಿಯನ್ನು ಅತಿಕ್ರಮಿಸಲಾಗಿದೆ ; ಹಾಗೂ ಈ ದೇವಾಲಯಗಳಲ್ಲಿ ಇದುವರೆಗೆ ಆಗಿರುವ ಹಣದ ಅವ್ಯವಹಾರ, ಕಳುವಾದ ಆಭರಣಗಳ ಕುರಿತಾಗಿ ಪ್ರತ್ಯೇಕವಾದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ;

(ಈ) ದೇವಾಲಯದ ಆಸ್ತಿ, ಆಭರಣಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳು ಯಾವುವು ? (ಪ್ರಸ್ತುತ ಪ್ರಗತಿಯ ವಿವರ ಒದಗಿಸುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವುದು

**ಶ್ರೀ ಐವನ್ ಡಿ.ಸೋಜಾ (ನಾಮನಿರ್ದೇಶಿತ ಹೊಂದಿದವರು) –**

೮೭೭ (೧೧೦೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಯಾವ ಯಾವ ತಾಲ್ಲೂಕುಗಳಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ ; ವಿವರ ನೀಡುವುದು ;

(ಆ) ಸದರಿ ಜಿಲ್ಲೆಯ ಮಂಗಳೂರು ನಗರದ ಕಂಕನಾಡಿ ಗ್ರಾಮಾಂತರ ಪೊಲೀಸ್ ಠಾಣೆಯು ಅಕ್ಕಿಗಿರಣಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಗಿರಣಿಯು ಸೋರುವಿಕೆ ಮತ್ತು ಅಸ್ತವ್ಯಸ್ತದಿಂದ ಕೂಡಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು ; ಈ ಠಾಣೆಯನ್ನು ಸ್ಥಳಾಂತರಿಸದೇ ಇರಲು ಕಾರಣಗಳೇನು ; ವಿವರ ನೀಡುವುದು

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಗಾಗಿ ಎಷ್ಟು ವಸತಿ ಗೃಹಗಳನ್ನು ನೂತನವಾಗಿ ನಿರ್ಮಿಸಲಾಗಿದೆ ; ಪ್ರಸ್ತುತ ಇರುವ ಬೇಡಿಕೆ ಎಷ್ಟು ; ಗೃಹ ನಿರ್ಮಾಣಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು ? (ವಿವರ ನೀಡುವುದು)

## ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ ಕುರಿತು

**ಶ್ರೀ ಐವನ್ ಡಿ.ಸೋಜಾ (ನಾಮನಿರ್ದೇಶನ ಹೊಂದಿದವರು) –**

೮೭೮ (೧೧೧೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಲಿ. ಪಣಂಬೂರು ಇವರಿಗೆ ಗಣಿ ನಿಕ್ಷೇಪ ಪ್ರದೇಶವನ್ನು ಮಂಜೂರು ಮಾಡದೇ ಇದ್ದುದರಿಂದ ಕಂಪನಿಯ ನೌಕರರು ನೌಕರಿ ಕಳೆದುಕೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಖಾಸಗಿ ಸಹಭಾಗಿತ್ವದ ಕಂಪನಿಗಳಿಗೆ ಕಬ್ಬಿಣದ ಅದಿರು ನಿಕ್ಷೇಪದ ಪ್ರದೇಶವನ್ನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶ ಇದ್ದರೂ, ಕೆ.ಐ.ಒ.ಸಿ.ಎಲ್. ಕಂಪನಿಗೆ ನೀಡದೆ ಇರಲು ಕಾರಣವೇನು ;

(ಇ) ಕೆ.ಐ.ಓ.ಸಿ.ಎಲ್.ಗೆ ಬಳ್ಳಾರಿಯ ರಮಣದುರ್ಗದಲ್ಲಿ ಮತ್ತು ಚಿಕ್ಕನಾಯಕನಹಳ್ಳಿ ಪ್ರದೇಶಗಳಲ್ಲಿ ನೀಡಲು ಅರ್ಜಿ ಸಲ್ಲಿಸಿದ್ದು, ಯಾವ ಹಂತದಲ್ಲಿದೆ ; (ವಿವರಣೆ ನೀಡುವುದು) ;

(ಈ) ಎಂ.ಎಂ.ಡಿ.ಆರ್. ಆಕ್ಟ್ ಅನ್ವಯ ಆಗಿರುವ ನಿಯಮಾವಳಿ ಪ್ರಕಾರ ರಾಜ್ಯ ಸರ್ಕಾರವು ಸಾರ್ವಜನಿಕ ರಂಗದ ಉದ್ದಿಮೆಗಳಿಗೆ ಗುತ್ತಿಗೆ ನೀಡಬಹುದಾಗಿದ್ದರೂ, ಕೆ.ಐ.ಒ.ಸಿ.ಎಲ್.ಗೆ ನೀಡದೇ ಇರಲು ಕಾರಣಗಳೇನು ?

## ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ

**ಶ್ರೀ ಐವನ್ ಡಿ.ಸೋಜಾ (ನಾಮನಿರ್ದೇಶನ ಹೊಂದಿದವರು) –**

೮೭೯ (೧೧೦೭) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರಿನಲ್ಲಿ ಹೈಕೋರ್ಟ್‌ನ ಸಂಚಾರಿ ಪೀಠ ಸ್ಥಾಪನೆ ಮಾಡಬೇಕೆಂಬ ವಕೀಲರ ಬೇಡಿಕೆಯನ್ನು ಸರ್ಕಾರ ಪರಿಗಣಿಸಿದೆಯೇ ; ಪರಿಗಣಿಸಿದ್ದಲ್ಲಿ, ಯಾವ ಹಂತದಲ್ಲಿದೆ ; ಬೇಡಿಕೆಯ ಬಗ್ಗೆ ವಿವರಣೆ ನೀಡುವುದು ;

(ಆ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುಬ್ಬಳ್ಳಿ, ಧಾರವಾಡ ಪೀಠ ಮತ್ತು ಸಂಚಾರಿ ಕಲಬುರ್ಗಿ ಪೀಠಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ದಕ್ಷಿಣ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ವಕೀಲರುಗಳ ಸಂಖ್ಯೆ ಎಷ್ಟು ?

## ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಎ.ಡಿ.ಬಿ. ಆಧಾರಿತ ಒಳಚರಂಡಿ ಮತ್ತು ನೀರಿನ ಯೋಜನೆ

**ಶ್ರೀ ಐವನ್ ಡಿ.ಸೋಜಾ (ನಾಮನಿರ್ದೇಶನ ಹೊಂದಿದವರು) –**

೮೮೦ (೧೧೦೫) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಎ.ಡಿ.ಬಿ. ಆಧಾರಿತ ಒಳಚರಂಡಿ ಮತ್ತು ನೀರಿನ ಯೋಜನೆ (ಕುಂಡ್ಸೆಫ್)ಗೆ ಪಡೆದುಕೊಂಡ ಒಟ್ಟು ಸಾಲದ ಮೊತ್ತ ಎಷ್ಟು ; ಈ ಯೋಜನೆಯಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ನೀರಿನ ಸರಬರಾಜು ವ್ಯವಸ್ಥೆಯನ್ನು ಸಂಪೂರ್ಣಗೊಳಿಸಲಾಗಿದೆಯೇ ; ಇಲ್ಲದೇ ಇದ್ದಲ್ಲಿ, ಕಾರಣವೇನು ;

(ಆ) ಈ ಯೋಜನೆ ಎಷ್ಟು ವರ್ಷದ ಅವಧಿಯೊಳಗೆ ಸಂಪೂರ್ಣಗೊಳಿಸಲು ತಿಳಿಸಲಾಗಿದೆ ; ಈ ಯೋಜನೆಗೆ ಖರ್ಚಾದ ಮೊತ್ತ ಎಷ್ಟು ; ಎಷ್ಟು ವರ್ಷಗಳಲ್ಲಿ ಈ ಯೋಜನೆಗಳು ಕಾರ್ಯಗತಗೊಳ್ಳುವುದು ; (ಸಂಪೂರ್ಣ ವಿವರ ನೀಡುವುದು)

(ಇ) ಕುಂಡ್ಸೆಫ್ ಯೋಜನೆ ಅರ್ಧದಲ್ಲಿ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದೇ ಒಳಚರಂಡಿ ಮತ್ತು ನೀರಿನ ಸರಬರಾಜು ವ್ಯವಸ್ಥೆಯಲ್ಲಿ ಅವ್ಯವಹಾರ ನಡೆದ ದೂರುಗಳಿದ್ದು, ಈ ಬಗ್ಗೆ ತನಿಖೆ ನಡೆಸಲಾಗಿದೆಯೇ ; ಇಲ್ಲದಿದ್ದಲ್ಲಿ, ಸರ್ಕಾರದಿಂದ ತನಿಖೆ ನಡೆಸಲಾಗುವುದೇ ;

(ಈ) ಎ.ಡಿ.ಬಿ. ಸಾಲವನ್ನು ಮರುಪಾವತಿಸಲು ನಗರ ಪಾಲಿಕೆ ತೆಗೆದುಕೊಂಡ ಕ್ರಮಗಳೇನು ; ವಿವರ ನೀಡುವುದು

(ಉ) ಪ್ರಸ್ತುತ ಬಾಕಿ ಇರುವ ಎ.ಡಿ.ಬಿ. ಸಾಲ ಎಷ್ಟು ; ಬಡ್ಡಿ ಸಮೇತ ಮತ್ತು ಬಾಕಿ ಇರುವ ಕಾಮಗಾರಿಗಳ ವೆಚ್ಚ ಎಷ್ಟು ?

## ಪೌರ ಕಾರ್ಮಿಕರ ವಸತಿಗೃಹಗಳು

**ಶ್ರೀ ಐವನ್ ಡಿ.ಸೋಜಾ (ನಾಮನಿರ್ದೇಶನ ಹೊಂದಿದವರು) –**

೮೮೧ (೧೧೦೮) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾಕಾಳಿಪಡ್ಪುನಲ್ಲಿರುವ ಪೌರ ಕಾರ್ಮಿಕರ ವಸತಿ ಗೃಹ ತೀರಾ ದುಸ್ಥಿತಿಯಲ್ಲಿದ್ದು, ವಾಸಕ್ಕೆ ಯೋಗ್ಯವಲ್ಲವೆಂದು ಇಲಾಖೆ ತಿಳಿಸಿದ್ದರೂ, ಸದರಿ ಕಟ್ಟಡದಲ್ಲಿರುವ ಪೌರ ಕಾರ್ಮಿಕರಿಗೆ ಪುನರ್‌ವಸತಿ ವ್ಯವಸ್ಥೆ ಮಾಡದಿರಲು ಕಾರಣಗಳೇನು ; ಪೌರ ಕಾರ್ಮಿಕರಿಗೆ ವಸತಿ ಭಾಗ್ಯ ಯೋಜನೆಯನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ;

(ಆ) ರಾಜ್ಯದಲ್ಲಿರುವ ಪೌರ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಷ್ಟು ಮಂದಿ ಪೌರ ಕಾರ್ಮಿಕರಿಗೆ ರಾಜ್ಯದಲ್ಲಿ ವಸತಿ ಯೋಜನೆಯನ್ನು ಒದಗಿಸಲಾಗಿದೆ ; (ವಿವರ ನೀಡುವುದು)

(ಇ) ಪೌರ ಕಾರ್ಮಿಕರಿಗೆ ನೀಡುವ ಸೌಲಭ್ಯವನ್ನು ಪಡೆಯಲು ಅವರ ಕನಿಷ್ಠ ಆದಾಯಮಿತಿಯನ್ನು ೪.೦೦ ಲಕ್ಷಕ್ಕೆ ಏರಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಪರಿಗಣಿಸಿದೆಯೇ ;

(ಈ) ಪೌರ ಕಾರ್ಮಿಕರಿಗೆ ನೀಡುವ ಕನಿಷ್ಠ ವೇತನ ಎಷ್ಟು ; ಕನಿಷ್ಠ ವೇತನದಿಂದ ಇತರ ಸೌಲಭ್ಯಗಳನ್ನು ಪಡೆಯಲು ಅನಾನುಕೂಲವಾಗಲಿದ್ದು, ಸರ್ಕಾರದ ಗಮನದಲ್ಲಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ರಾಜ್ಯದ ಕರಾವಳಿ ಜಿಲ್ಲೆಯಲ್ಲಿನ ಮರಳು ಗಣಿಗಾರಿಕೆಗೆ ಇರುವ ಕಾನೂನು ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೨ (೧೧೧೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಸಿ.ಆರ್.ಝಡ್ ವ್ಯಾಪ್ತಿಯಲ್ಲಿ ಮರಳುಗಾರಿಕೆ ನಡೆಸಲು ಇರುವ ಕೇಂದ್ರ ಹಾಗೂ ರಾಜ್ಯದ ಸರ್ಕಾರಗಳ ಕಾನೂನು ಏನು; (ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾನೂನಿನ ಪ್ರತಿ ಒದಗಿಸುವುದು)

(ಆ) ಸದರಿ ಕರಾವಳಿ ಜಿಲ್ಲೆಗಳಲ್ಲಿ ಸಿ.ಆರ್. ಝಡ್ ವ್ಯಾಪ್ತಿಗೆ ಒಳಪಡದ ಪ್ರದೇಶಗಳಲ್ಲಿ ಮರಳುಗಾರಿಕೆ ನಡೆಸಲು ಇರುವ ಕಾನೂನು ಏನು;

(ಇ) ರಾಜ್ಯದ ಕರಾವಳಿ ಜಿಲ್ಲೆಗಳ ಸಿ.ಆರ್.ಝಡ್ ವ್ಯಾಪ್ತಿಯಲ್ಲಿ ತೆರೆಯುವ ಮರಳು ಉಪ್ಪು ಮಿಶ್ರಿತವಾಗಿರುವುದನ್ನು ಸರ್ಕಾರ ಗಮನಿಸಿದೆಯೇ; ಇದರಿಂದ ನಿರ್ಮಾಣವಾಗುವ ಕಟ್ಟಡ ಹಾಗೂ ಕಾಮಗಾರಿಗಳ ಮೇಲೆ ದುಷ್ಪರಿಣಾಮವಾಗುವುದನ್ನು ಸರ್ಕಾರ ಗಮನಿಸಿದೆಯೇ; ಗಮನಿಸಿದಲ್ಲಿ, ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

# ಉಡುಪಿ ಜಿಲ್ಲೆಯಲ್ಲಿ ಕೋಟ, ಕುಂದಾಪುರ, ವಂಡ್ಸೆ ಮತ್ತು ಬೈಂದೂರು ಹೋಬಳಿಯಲ್ಲಿ ಗಣಿಗಾರಿಕೆ ಪರವಾನಿಗೆದಾರರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೩ (೧೧೧೨) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯ ಕೋಟ, ಕುಂದಾಪುರ, ವಂಡ್ಸೆ ಮತ್ತು ಕುಂದಾಪುರ ಹೋಬಳಿಯಲ್ಲಿ ಶಿಲೆಕಲ್ಲು (ಗ್ರಾನೈಟ್) ಕೆಂಪುಕಲ್ಲು ಮತ್ತು ಮರಳು ಗಣಿಗಾರಿಕೆಗೆ ಪರವಾನಿಗೆ ಹಾಗೂ ಲೀಸ್ ಪಡೆದ ಪರವಾನಿಗೆದಾರರು ಎಷ್ಟು; ಅವರು ಯಾರ್‍ಯಾರು; (ಹೋಬಳಿವಾರು, ಪರವಾನಿಗೆದಾರರ ಹೆಸರು, ವಿಳಾಸ, ವಿಸ್ತೀರ್ಣ ಮತ್ತು ಪರವಾನಿಗೆಯ ಅವಧಿಯೊಂದಿಗೆ ವಿವರ ನೀಡುವುದು)

(ಆ) ಸದರಿ ಜಿಲ್ಲೆಯ ಕೋಟ, ಕುಂದಾಪುರ, ವಂಡ್ಸೆ ಮತ್ತು ಕುಂದಾಪುರ ಹೋಬಳಿಯಲ್ಲಿ ಶಿಲೆಕಲ್ಲು (ಗ್ರಾನೈಟ್) ಕೆಂಪುಕಲ್ಲು ಮತ್ತು ಮರಳು ಗಣಿಗಾರಿಕೆ ಪರವಾನಿಗೆ ಹಾಗೂ ಲೀಸ್ ಪಡೆದ ಪರವಾನಿಗೆದಾರರ ಮೇಲೆ ಒಟ್ಟು ಎಷ್ಟು ಪ್ರಕರಣಗಳಲ್ಲಿ ದಂಡನೆ ವಿಧಿಸಲಾಗಿದೆ ಮತ್ತು ಅವರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಬಾಕಿ ಮೊತ್ತವೆಷ್ಟು; (ಪ್ರಕರಣವಾರು, ಪರವಾನಿಗೆದಾರರ ಹೆಸರು, ವಿಳಾಸ ವಿಸ್ತೀರ್ಣದೊಂದಿಗೆ ವಿವರ ನೀಡುವುದು)

(ಇ) ಗಣಿಗುತ್ತಿಗೆ ಪರವಾನಿಗೆದಾರರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಬಾಕಿ ಹಣವನ್ನು ವಸೂಲು ಮಾಡದೆ ಪರವಾನಿಗೆ ನವೀಕರಿಸುವ ಔಚಿತ್ಯವೇನು; ಈ ಪರವಾನಿಗೆ ನವೀಕರಿಸಿದ ಅಧಿಕಾರಿಯನ್ನು ಹೊಣೆ ಮಾಡಿ ಕ್ರಮಕೈಗೊಳ್ಳಲಾಗುವುದೆ; ಇಲ್ಲವಾದಲ್ಲಿ, ಕಾರಣವೇನು?

## ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆದ ಕೊಲೆ ಪ್ರಕರಣಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭೪ (೧೧೧೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ನಡೆದ ಕೊಲೆ ಪ್ರಕರಣಗಳೆಷ್ಟು ಮತ್ತು ಇವುಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು ಮತ್ತು ಇವುಗಳಲ್ಲಿ ಪತ್ತೆ ಹಚ್ಚಲಾಗದ ಪ್ರಕರಣಗಳೆಷ್ಟು; (ವರ್ಷವಾರು, ಪ್ರಕರಣವಾರು, ಠಾಣಾವಾರು ವಿವರ ನೀಡುವುದು)

(ಆ) ಸದರಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆದ ಕೊಲೆ ಪ್ರಕರಣಗಳ ಆರೋಪಗಳಲ್ಲಿ ಕಾರಾಗೃಹದಲ್ಲಿರುವ ಆರೋಪಿಗಳು ಎಷ್ಟು ಮತ್ತು ಜಾಮೀನಿನ ಮೇಲೆ ಬಿಡುಗಡೆಗೊಂಡಿರುವ ಆರೋಪಿಗಳ ಸಂಖ್ಯೆ ಎಷ್ಟು; (ವರ್ಷವಾರು, ಪ್ರಕರಣವಾರು, ಠಾಣೆವಾರು ವಿವರ ನೀಡುವುದು)

(ಇ) ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ವರ್ಷ ನಡೆದ ಕಾಲೇಜು ವಿದ್ಯಾರ್ಥಿನಿ ರತ್ನಾ ಕೋಠಾರಿಯ ಸಂಶಯಾಸ್ಪದ ಸಾವಿನ ತನಿಖೆಯನ್ನು ನಡೆಸಲು ವಿಶೇಷ ತನಿಖಾ ತಂಡವನ್ನು ರಚಿಸಲಾಗುವುದೇ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ಶಿಕ್ಷಣ ಸಂಸ್ಥೆಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭೫ (೧೧೧೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮುಜರಾಯಿ ಇಲಾಖೆಯಿಂದ ವಿವಿಧ ದೇವಸ್ಥಾನಗಳ ಮುಖಾಂತರ ನಡೆಸಲ್ಪಡುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಮತ್ತು ಕೊರತೆ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು; (ಕಾರ್ಯನಿರ್ವಹಿಸುತ್ತಿರುವವರ ಹೆಸರು, ವಿಳಾಸ, ಅವಧಿಯೊಂದಿಗೆ ಶಿಕ್ಷಣ ಸಂಸ್ಥೆವಾರು ವಿವರ ನೀಡುವುದು)

(ಆ) ಮೇಲಿನ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿ ಹೊಂದಿ ಸೇವಾ ಖಾಯಂಯಾತಿ ಆಗದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಮತ್ತು ಮೀಸಲಾತಿಯಿದ್ದು ಸೇವಾ ಖಾಯಂಯಾತಿ ಆಗದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಕಾಲಮಿತಿಯೊಂದಿಗೆ ಸೇವಾ ಖಾಯಂಯಾತಿಗೊಳಿಸಲಾಗುವುದೇ; ಇಲ್ಲವಾದಲ್ಲಿ ಕಾರಣವೇನು? (ಸೇವಾ ಖಾಯಂಯಾತಿ ಆಗದ ಬೋಧಕ, ಬೋಧಕೇತರ ಸಿಬ್ಬಂದಿಗಳ ಹೆಸರು, ವಿಳಾಸ ಸೇವಾ ಅವಧಿಯೊಂದಿಗೆ ವಿವರ ನೀಡುವುದು)

## ರಾಜ್ಯದಲ್ಲಿ ಗೋಮಾಳಗಳ ರಕ್ಷಣೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೬ (೧೧೧೩) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಗೋಮಾಳಗಳ ರಕ್ಷಣೆಯ ಹೊಣೆಯನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ನೀಡಲಾಗುವುದೇ; ಇಲ್ಲವಾದಲ್ಲಿ ಕಾರಣವೇನು;

(ಆ) ರೈತರಿಗೆ, ಹೈನುಗಾರರಿಗೆ ಉಪಯೋಗಕ್ಕೆ ಸಿಗದ ಗೋಮಾಳಗಳ ರಕ್ಷಣೆಯ ಕನಿಷ್ಠ ಹೊಣೆಯನ್ನಾದರೂ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ವಹಿಸಿಕೊಡದಿರುವ ಉದ್ದೇಶವೇನು; ಸರ್ಕಾರ ಈ ಬಗ್ಗೆ ಚಿಂತನೆ ನಡೆಸುವುದೇ?

## ಮಠಗಳ ನಿಯಂತ್ರಣ ವಿಧೇಯಕದ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) –**

೮೮೭ (೧೧೧೬) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಢನಂಬಿಕೆ ನಿಷೇಧ ಕಾಯ್ದೆ ಹಾಗೂ ಅದ್ದೂರಿ ವಿವಾಹ ನಿಯಂತ್ರಣ ಕಾಯ್ದೆ ನಂತರ ಮಠಗಳ ನಿಯಂತ್ರಣ ವಿಧೇಯಕಕ್ಕೆ ಸರ್ಕಾರ ಮುಂದಾಗಿರುವುದು ನಿಜವೇ ;

(ಆ) ಇದಕ್ಕೆ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನಲೆಯಲ್ಲಿ ಧಾರ್ಮಿಕ ಕೇಂದ್ರದ ಒಬ್ಬೊಬ್ಬ ಸ್ವಾಮೀಜಿಗಳನ್ನು ಗುರಿಯಾಗಿಸಿಕೊಡು ಸರ್ಕಾರ ಕಾರ್ಯಾಚರಣೆಗೆ ಮುಂದಾಗಿದೆಯೇ ;

(ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು : ಸರ್ಕಾರದ ಈ ಚಿಂತನೆಗಳು ಯಾವ ಉದ್ದೇಶದಿಂದ ಪ್ರಭಾವಿತಗೊಂಡಿವೆ ?

## ಶಿವಮೊಗ್ಗ ತಾಲ್ಲೂಕಿನ ಹಣಗೆರೆಕಟ್ಟೆ ದೇವಸ್ಥಾನದ ಅಭಿವೃದ್ಧಿ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) –**

೮೮೮ (೧೧೧೫) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ತಾಲ್ಲೂಕಿನಲ್ಲಿರುವ ಹಣಗೆರೆಕಟ್ಟೆ ದೇವಸ್ಥಾನದಲ್ಲಿ ಕಳೆದ ಮೂರು ವರ್ಷಗಳಲ್ಲಿ (೨೦೧೨–೧೩, ೨೦೧೩–೧೪ ಮತ್ತು ೨೦೧೪–೧೫) ಭಕ್ತಾದಿಗಳಿಂದ ಹಾಗೂ ಇತರ ಮೂಲಗಳಿಂದ ಹುಂಡಿಗೆ ಬಂದಿರುವ ಆದಾಯ ಎಷ್ಟು ;

(ಆ) ಹಣಗೆರೆಕಟ್ಟೆಯಲ್ಲಿನ ದೇವಾಲಯದಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೇ ಭಕ್ತಾದಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ೩ ವರ್ಷಗಳಲ್ಲಿ ಹಣಗೆರೆಕಟ್ಟೆ ದೇವಾಲಯದ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ದೇವಸ್ಥಾನದ ಹಣ ಎಷ್ಟು ; ಹಾಗೂ ಸರ್ಕಾರದ ಅನುದಾನ ಎಷ್ಟು ;

(ಈ) ದೇವಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಚಕರಿಗೆ ಹಾಗೂ ಇತರೆ ಸಿಬ್ಬಂದಿಗಳಿಗೆ ಪ್ರತಿ ವರ್ಷ ನೀಡುತ್ತಿರುವ ವೇತನ ಎಷ್ಟು ? (ವಿವರ ನೀಡುವುದು)

## ಲೆಕ್ಕ ತಪಾಸಣಾ ವರದಿ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) –**

೮೮೯ (೧೧೧೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ನಗರ ಮತ್ತು ಗ್ರಾಮ ಸ್ಥಳೀಯ ಸಂಸ್ಥೆಗಳಲ್ಲಿ ನಡೆಸುವ ಲೆಕ್ಕ ತಪಾಸಣೆ ವರದಿಗೆ ಸಕಾಲದಲ್ಲಿ ಅನುಪಾಲನಾ ವರದಿ ಸಲ್ಲಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

(ಆ) ಕಳೆದ ಮೂರು ವರ್ಷಗಳಲ್ಲಿ ಲೆಕ್ಕ ತಪಾಸಣೆ ವರದಿಯಲ್ಲಿ ಆಕ್ಷೇಪಣೆಗೆ ಮತ್ತು ವಸೂಲಾತಿಗೆ ಇಟ್ಟಿರುವ ಮೊತ್ತ ಎಷ್ಟು; (ಸ್ಥಳೀಯ ಸಂಸ್ಥೆವಾರು ಮಾಹಿತಿ ನೀಡುವುದು)

(ಇ) ಈ ರೀತಿಯಾಗಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸುವ ಮೊತ್ತಕ್ಕೆ ಸಕಾಲದಲ್ಲಿ ತೀರುವಳಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ಕುದುರೆಮುಖ ಅದಿರು ಸಂಸ್ಥೆ ತೆರವು

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯೦ (೧೧೧೮) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಡಿಗೆರೆ ತಾಲ್ಲೂಕಿನ ಕುದುರೆಮುಖ ಪಟ್ಟಣದಲ್ಲಿದ್ದ ಕೆಐಒಸಿಎಲ್ ಸಂಸ್ಥೆ ಸ್ಥಗಿತಗೊಂಡು ಈಗಾಗಲೇ ೯ ವರ್ಷಗಳು ಕಳೆದಿದ್ದು, ಸಂಸ್ಥೆಯ ಯಂತ್ರಗಳನ್ನು ತೆರವುಗೊಳಿಸುವ ಕಾಮಗಾರಿ ಗುತ್ತಿಗೆಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ;

(ಆ) ಯಂತ್ರಗಳೊಂದಿಗೆ ಈಗ ಇರುವ ಕಟ್ಟಡಗಳನ್ನು ತೆರವುಗೊಳಿಸಲಾಗುತ್ತದೆಯೇ ಅಥವಾ ಕಟ್ಟಡಗಳ ರಕ್ಷಣೆಗೆ ಏನು ಕ್ರಮ ಕೈಗೊಳ್ಳಲಾಗಿದೆ; ತೆರವುಗೊಳಿಸುವ ಕಾಮಗಾರಿ ಯಾವ ಹಂತದಲ್ಲಿದೆ ತೆರವುಗೊಳಿಸುವ ಕಾಮಗಾರಿ ಪೂರ್ಣಗೊಳ್ಳಲು ಇನ್ನು ಎಷ್ಟು ಕಾಲಾವಕಾಶ ಬೇಕಾಗಬಹುದು;

(ಇ) ಅದಿರು ಸಂಸ್ಥೆ ತೆರವಾಗಿರುವ ಪಟ್ಟಣದಲ್ಲಿ ಪರಿಸರಸ್ನೇಹಿ ಯೋಜನೆಗಳನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ?

**ಚಿಕ್ಕಮಗಳೂರು ಎಂ.ಜಿ. ರಸ್ತೆ, ಅಂಬೇಡ್ಕರ್ ಬೀದಿ ಅಭಿವೃದ್ಧಿ**

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯೧ (೧೧೩೬) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಂಚಾರಕ್ಕೆ ಯೋಗ್ಯವಾಗಿದ್ದ ಚಿಕ್ಕಮಗಳೂರಿನ ಎಂ.ಜಿ. ರಸ್ತೆ ಮರು ಅಭಿವೃದ್ಧಿಯ ಅಗತ್ಯವಿರುತ್ತದೆಯೇ; (ಪೂರ್ಣ ಮಾಹಿತಿ ಒದಗಿಸುವುದು)

(ಆ) ಸದರಿ ಎಂ.ಜಿ. ರಸ್ತೆ ಅಭಿವೃದ್ಧಿ ಕಾಮಗಾರಿಗೆ ಒದಗಿಸಲಾಗಿರುವ ಅನುದಾನ ಮೊತ್ತ ಎಷ್ಟು;

(ಇ) ಕೈಗೊಂಡಿರುವ ಕಾಮಗಾರಿಗಳು ಯಾವುವು? (ಕಾಮಗಾರಿವಾರು ಮಾಹಿತಿ ಒದಗಿಸುವುದು)

(ಈ) ಎಂ.ಜಿ. ರಸ್ತೆಯ ಜೊತೆಗೆ ಚಿಕ್ಕಮಗಳೂರಿನ ಡಾ: ಬಿ.ಆರ್. ಅಂಬೇಡ್ಕರ್ ಬೀದಿಯ ಅಭಿವೃದ್ಧಿ ಕಾಮಗಾರಿಗೆ ಎಷ್ಟು ಕಿಲೋ ಮೀಟರ್ ನಿಗದಿಪಡಿಸಲಾಗಿದೆ;

(ಉ) ಎರಡೂ ರಸ್ತೆಗಳ ಒಂದೊಂದು ಕಿ.ಮೀ.ಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ? (ಮಾಹಿತಿಯನ್ನು ಒದಗಿಸುವುದು)

**ಗಡಿಭಾಗದ ಕನ್ನಡಿಗರಿಗೆ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯೨ (೧೧೨೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿಯ ಗಡಿಭಾಗದ ಕನ್ನಡಿಗರಿಗೆ ಅಲ್ಲಿನ ಸರ್ಕಾರವು ಮೂಲಭೂತ ಸೌಲಭ್ಯಗಳನ್ನು ಒದಗಿಸದೆ ಇರುವುದರಿಂದ ಅಲ್ಲಿಯ ಕನ್ನಡಿಗರು ಆ ಭಾಗವನ್ನು ಕರ್ನಾಟಕದಲ್ಲಿ ಸೇರಿಸಲು ಧರಣಿ ನಡೆಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ನಮ್ಮ ರಾಜ್ಯ ಸರ್ಕಾರವು ಅಲ್ಲಿಯ ಕನ್ನಡಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚೆ ನಡೆಸಲಾಗಿದೆಯೆ;

(ಇ) ಅಲ್ಲಿಯ ಕನ್ನಡಿಗರಿಗೆ ನಮ್ಮ ಸರ್ಕಾರವು ನೆರವು ನೀಡುವ ಕುರಿತು ಚಿಂತಿಸುವುದೇ?

**ಬೆಳಗಾವಿ ಮಹಿಳಾ ಪೊಲೀಸ್ ಠಾಣೆ ನಿಷ್ಕ್ರಿಯವಾಗಿರುವ ಬಗ್ಗೆ**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯೩ (೧೧೨೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬೆಳಗಾವಿ ಮಹಾನಗರದಲ್ಲಿ ಇರುವ ಮಹಿಳಾ ಪೊಲೀಸ್ ಠಾಣೆಯು ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಹಾಗಿದ್ದಲ್ಲಿ, ಮಹಿಳಾ ಪೊಲೀಸ್ ಠಾಣೆಯು ಸಾರ್ವಜನಿಕರಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು;

(ಇ) ಸದರಿ ಮಹಿಳಾ ಪೊಲೀಸ್ ಠಾಣೆಗೆ ಅವಶ್ಯವಿರುವ ಸಿಬ್ಬಂದಿ ನೇಮಕಾತಿ ಮಾಡಲಾಗಿದೆಯೆ; ಹಾಗಿದ್ದಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು;

ಖಾಲಿ ಇರುವ ಹುದ್ದೆಗಳೆಷ್ಟು; ಅವಶ್ಯವಿರುವಷ್ಟು ಖಾಲಿ ಇರುವ ಮಹಿಳಾ ಪೊಲೀಸ್ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಕೈಕೊಂಡ ಕ್ರಮಗಳೇನು;

(ಈ) ಶಾಲಾ ಕಾಲೇಜುಗಳಲ್ಲಿ ಯುವತಿಯರ ಮೇಲೆ ನಡೆಯುವ ರ್‍ಯಾಗಿಂಗ್ ಲೈಂಗಿಕ ಶೋಷಣೆ ಮುಂತಾದವುಗಳ ಬಗ್ಗೆ ದೂರು ನೀಡಲು ಆಯ್ದ ಕಾಲೇಜುಗಳಲ್ಲಿ ಪಿಂಕ್ ಬಾಕ್ಸ್ ಇಡುವ ವ್ಯವಸ್ಥೆ ಇದ್ದರೂ ಬೆಳಗಾವಿ ನಗರದ ಕಾಲೇಜಗಳಲ್ಲಿ ಅಳವಡಿಸದೆ ಇರುವುದರ ಬಗ್ಗೆ ಸರ್ಕಾರವು ಕೈಕೊಂಡ ಕ್ರಮಗಳೇನು?

## ಸುವರ್ಣ ವಿಧಾನ ಸೌಧದ ಸುತ್ತಮುತ್ತ ರೈತರ ಜಮೀನನ್ನು ವಶಪಡಿಸಿಕೊಂಡಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯೪ (೧೧೨೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಸುವರ್ಣ ವಿಧಾನಸೌಧ ಅಧಿವೇಶನದ ವೇಳೆ ಪ್ರತಿಭಟನೆ ಇನ್ನಿತರ ಕಾರ್ಯಕ್ರಮಗಳಿಗೆ ಸುತ್ತ ಮುತ್ತಲಿನ ರೈತರಿಂದ ವಶಪಡಿಸಿಕೊಂಡ ಜಮೀನಗಳಿಗೆ ಗುಂಟೆಗೆ ಇಂತಿಷ್ಟು ಅಂತ ಹಣ ನೀಡವುದಾಗಿ ಹೇಳಿರುವ ಅಧಿಕಾರಿಗಳು ಅವರಿಗೆ ಹಣ ನೀಡದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ಡಿಸಂಬರ್ ಮತ್ತು ಜನವರಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ವೇಳೆ ಪ್ರತಿಭಟನೆ ಇನ್ನಿತರ ಕಾರ್ಯಕ್ರಮಗಳಿಗೆ ಸರ್ಕಾರವು ವಶಪಡಿಸಿಕೊಂಡ ಜಮೀನೆಷ್ಟು;

(ಇ) ವಶಪಡಿಸಿಕೊಂಡ ಜಮೀನಿಗೆ ಪ್ರತಿ ಗುಂಟೆಗೆ ನಿಗದಿಪಡಿಸಿದ ಸಹಾಯ ಧನವೆಷ್ಟು;

(ಈ) ಇಲ್ಲಿಯವರಿಗೆ ಎಷ್ಟು ಜನ ರೈತರಿಗೆ ಸಹಾಯಧನ ನೀಡಲಾಗಿದೆ; ರೈತರ ಹೆಸರು ಸಹಿತ ವಿವರಣೆ ಒದಗಿಸುವುದು;

(ಉ) ರೈತರಿಗೆ ಸಹಾಯ ಧನ ನೀಡದೆ ಇದ್ದಲ್ಲಿ, ಅದಕ್ಕೆ ಕಾರಣಗಳೇನು; ರೈತರಿಗೆ ಸಹಾಯ ಧನ ಯಾವ ಕಾಲಮಿತಿಯಲ್ಲಿ ನೀಡಲಾಗುವುದು?

## ಗಣಿಗಾರಿಕೆ ನಿಯಮಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯೫ (೧೧೪೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮರಳು ಗಣಿಗಾರಿಕೆ ಸಂಬಂಧ ಈಗಿರುವ ನಿಯಮಗಳೇನು; ಈ ಸಂಬಂಧ ಇರುವ ಮಾರ್ಗ ಸೂಚಿಗಳೇನು;

(ಆ) ಅಕ್ರಮ ಮರಳುಗಾರಿಕೆ ತಡೆಯುವಲ್ಲಿ ಸರ್ಕಾರ ವಿಫಲವಾಗಿರುವುದು ನಿಜವೆ; ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಕರಾವಳಿಯ ಒಳನಾಡು ಮತ್ತು CRZ ವ್ಯಾಪ್ತಿಯಲ್ಲಿ ಮರಳುಗಾರಿಕೆ ನಡೆಸಲು ಇರುವ ನಿಯಮಗಳ; ಸಂಪೂರ್ಣ ವಿವರ ನೀಡುವುದು

(ಈ) ರಾಜ್ಯದಲ್ಲಿ ಕೆಂಪು ಕಲ್ಲು, ಶಿಲೆ ಕಲ್ಲು ಗಣಿಗಾರಿಕೆಗೆ ಸಂಬಂಧಪಟ್ಟ ನಿಯಮಗಳೇನು;

(ಉ) ರಾಜ್ಯದಲ್ಲಿ ಕಲ್ಲುಪುಡಿ ಘಟಕ ಸ್ಥಾಪಿಸುವ ಸಂಬಂಧ ಮತ್ತು ಸುರಕ್ಷಿತ ವಲಯ ಘೋಷಣೆ ಬಗ್ಗೆ ಇರುವ ನಿಯಮ, ಷರತ್ತುಗಳೇನು; ವಿವಿಧ ಜಿಲ್ಲೆಗಳಲ್ಲಿ ನಿಯಮಗಳಲ್ಲಿ ವ್ಯತ್ಯಾಸ ಇರುವುದು ನಿಜವೆ? (ಸಂಪೂರ್ಣ ವಿವರ ನೀಡುವುದು)

## ಪೌರಕಾರ್ಮಿಕರ ಸೌಲಭ್ಯಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)–**

೮೯೬ (೧೧೩೦) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಪೌರಕಾರ್ಮಿಕರ ಸಂಖ್ಯೆ ಎಷ್ಟು ; (ಮಹಾನಗರ ಪಾಲಿಕೆವಾರು ವಿವರ ನೀಡುವುದು)

(ಆ) ಪೌರಕಾರ್ಮಿಕರಿಗೆ ನೀಡುತ್ತಿರುವ ವೇತನ ಎಷ್ಟು; ಕೆಲವು ಪ್ರಕರಣಗಳಲ್ಲಿ ಕಡಿಮೆ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಪೌರಕಾರ್ಮಿಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು ; (ಸಂಪೂರ್ಣ ವಿವರ ನೀಡುವುದು)

(ಈ) ಗುತ್ತಿಗೆ ಪೌರಕಾರ್ಮಿಕರ ವೇತನದಿಂದ ಕಡಿತಗೊಳಿಸುವ ಪಿ.ಎಫ್ ಮತ್ತು ಇ.ಎಸ್.ಐ ಹಣವು ಸಂಬಂಧಪಟ್ಟ ಇಲಾಖೆಗೆ ಜಮಾಗೊಳ್ಳದೇ ಇರುವುದು ನಿಜವೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

(ಉ) ಪೌರಕಾರ್ಮಿಕರಿಗೆ ನಿಗದಿತ ಸಮಯದಲ್ಲಿ ವೇತನ ಪಾವತಿ ಸುರಕ್ಷಾ ಉಪಕರಣ ಇ.ಎಸ್.ಐ., ಪಿ.ಎಫ್ ಸೌಲಭ್ಯ ಸ್ಮಾರ್ಟ್ ಕಾರ್ಡ್ ಸೌಲಭ್ಯ, ಮನೆ, ಮಕ್ಕಳ ವಿದ್ಯಾಭ್ಯಾಸ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸಲು ಸರ್ಕಾರದ ಮುಂದಿರುವ ಯೋಚನೆ, ಯೋಜನೆಗಳೇನು ? (ವಿವರ ನೀಡುವುದು)

## ಮುಜರಾಯಿ ಇಲಾಖೆಯ ಅನುದಾನ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** –

೮೯೭ (೧೧೨೯) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆಯಲ್ಲಿ ಅನುದಾನ ಮಂಜೂರಾತಿ, ಖರೀದಿ ಮತ್ತು ಮಂಜೂರಾದ ದೇವಸ್ಥಾನದ ಹೆಸರು ತಿದ್ದುಪಡಿ, ಆಹಾರ ಸಾಮಗ್ರಿ ವಿತರಣೆ ಸಂಬಂಧ ಮಾಡಲಾದ ಅಧಿಕಾರ ಹಂಚಿಕೆಯೇನು; (ಸಂಪೂರ್ಣ ವಿವರ ನೀಡುವುದು)

(ಆ) ಈಗಾಗಲೇ ಮಂಜೂರಾದ ದೇವಸ್ಥಾನಗಳ ಹೆಸರು ತಿದ್ದುಪಡಿಯಂತಹ ಸಣ್ಣ ಪುಟ್ಟ ಕೆಲಸಗಳಿಗೆ ಬೆಂಗಳೂರಿನ ಆಯುಕ್ತಾಲಯ, ಸಚಿವಾಲಯಗಳಲ್ಲಿ ಅಲೆದಾಡಬೇಕಾದ ಪರಿಸ್ಥಿತಿ ಉಂಟಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಧಾರ್ಮಿಕ ಕಾರ್ಯಕ್ರಮಗಳಿಗೆ ಆಹಾರ ಸಾಮಗ್ರಿ ವಿತರಣೆಗೆ ಮಂಜೂರಾತಿ, ಮಂಜೂರಾದ ದೇವಸ್ಥಾನದ ಹೆಸರು ತಿದ್ದುಪಡಿ, ಜಿಲ್ಲೆಯೊಳಗಿನ ದೇವಸ್ಥಾನದ ಅನುದಾನಗಳ ವರ್ಗಾವಣೆ ಅಧಿಕಾರವನ್ನು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನಿರ್ವಹಿಸಿದಲ್ಲಿ ಸಾರ್ವಜನಿಕರಿಗೆ ಸಹಾಯವಾಗಲಿದ್ದು ಸರ್ಕಾರ ಪರಿಶೀಲಿಸುವುದೇ ;

(ಈ) ಇಲಾಖೆಯಲ್ಲಿ ಅರ್ಜಿ ವಿಲೇವಾರಿಯೂ ಸೇರಿದಂತೆ ಅನೇಕ ಕೆಲಸ ಕಾರ್ಯಗಳು ತಿಂಗಳುಗಟ್ಟಲೆ ವಿಳಂಬವಾಗುವುದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ನೀಡುವುದು)

## ವರಾಹಿ ಜಲ ವಿದ್ಯುತ್ ತಯಾರಿಕ ಘಟಕಕ್ಕೆ ಭದ್ರತೆ ಒದಗಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೯೮ (೧೧೨೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ "ವರಾಹಿ ಜಲ ವಿದ್ಯುತ್ ಯೋಜನಾ ಘಟಕಕ್ಕೆ" ಸೂಕ್ತ ಭದ್ರತೆ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಸದರಿ ಘಟಕವು ನಕ್ಸಲ್ ಪೀಡಿತ ಪ್ರದೇಶದಲ್ಲಿರುವುದು ಹಾಗೂ ಯಾವುದೇ ಭದ್ರತೆ ಇಲ್ಲದಿರುವುದರಿಂದ ಸುಲಭವಾಗಿ ಭಯೋತ್ಪಾದನಾ ದಾಳಿಗೆ ಒಳಗಾಗುವ ಅಪಾಯದ ಬಗ್ಗೆ ಸರ್ಕಾರ ಗಮನಿಸಿದೆಯೆ;

(ಇ) ಹಾಗಿದ್ದಲ್ಲಿ, ಸದರಿ ಘಟಕಕ್ಕೆ ರಕ್ಷಣೆ ಹಾಗೂ ಭದ್ರತೆ ಒದಗಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

## ಅಕ್ರಮ ನೀರಾ/ಹೆಂಡ ಮಾರಾಟಗಾರರ ಕುರಿತು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೯೯ (೧೧೨೮) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನೀರಾ ಮತ್ತು ಹೆಂಡ ಮಾರಾಟ ಮಾಡಲು ಅನುಮತಿ ನೀಡಲು ಸರ್ಕಾರ ಯೋಚಿಸಿದೆಯೇ; ಹಾಗಿದ್ದಲ್ಲಿ, ಯಾವಾಗ ನೀಡಲಾಗಿದೆ;

(ಆ) ನೀರಾ ಮತ್ತು ಹೆಂಡ ಮಾರಾಟ ಮಾಡಲು ನೀಡದಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಹೆಂಡ ಮತ್ತು

ನೀರಾ ಮಾರಾಟ ಮಾಡಿದವರ ವಿರುದ್ಧ ಎಷ್ಟು ಪ್ರಕರಣಗಳನ್ನು ಎಲ್ಲೆಲ್ಲಿ ಪತ್ತೆ ಹಚ್ಚಲಾಗಿದೆ; ಅಂತಹವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ;

(ಇ) ಜಿಲ್ಲೆಯಲ್ಲಿ ಅಕ್ರಮ ನೀರಾ ಮತ್ತು ಹೆಂಡ ಮಾರಾಟ ತಡೆಗಟ್ಟಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ?

## ಬಳ್ಳಾರಿ ನಗರದಲ್ಲಿ ವಿದ್ಯುತ್ ಚಿತಾಗಾರ ಸ್ಥಾಪಿಸುವ ಕುರಿತು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦೦ (೧೧೨೬) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ಜನಸಂಖ್ಯೆಗೆ ಅನುಗುಣವಾಗಿ ಇಲ್ಲಿ "ವಿದ್ಯುತ್ ಚಿತಾಗಾರ" ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು;

(ಆ) ಹಾಗಿದ್ದಲ್ಲಿ, ಏನಾದರೂ ಸರ್ವೆ ಮಾಡಲು ಕ್ರಮಕೈಗೊಳ್ಳಲಾಗಿದೆ; ಈ ಬಗ್ಗೆ ಸಂಪೂರ್ಣ ವಿವರ ನೀಡುವುದು;

(ಇ) ನಗರದ ಎಲ್ಲೆಲ್ಲಿ ಚಿತಾಗಾರ ಸ್ಥಾಪಿಸಲು ಜಾಗಗಳನ್ನು ಗುರತಿಸಲಾಗಿದೆ;

(ಈ) ಬಳ್ಳಾರಿ ನಗರದಲ್ಲಿ ವಿದ್ಯುತ್ ಚಿತಾಗಾರ ಸ್ಥಾಪಿಸಿ ಸಾರ್ವಜನಿಕರಿಗೆ ಯಾವಾಗ ಅನೂಕೂಲ ಮಾಡಿಕೊಡಲಾಗುವುದು?

## ಬಳ್ಳಾರಿ ನಗರಕ್ಕೆ ೨೪x೭ ನೀರು ಪೂರೈಕೆ ಕಾಮಗಾರಿ ವಿಳಂಬ ಕುರಿತು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦೧ (೧೧೨೭) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರಕ್ಕೆ ೨೪X೭ ನೀರು ಸರಬರಾಜು ಮಾಡುವ ಯೋಜನೆಯು ಯಾವ ಹಂತದಲ್ಲಿದೆ;

(ಆ) ಕಳೆದ ನಾಲ್ಕು ವರ್ಷಗಳಿಂದ ಈ ಯೋಜನೆ ಕಾಮಗಾರಿಗಳು ನಡೆಯುತ್ತಿದ್ದು, ಕಾಮಗಾರಿಯ ನಿಧಾನಗತಿಯಿಂದ ಯೋಜನಾ ವೆಚ್ಚ ಹೆಚ್ಚಾಗುತ್ತಿದ್ದು, ಇದರಿಂದ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

(ಇ) ಪ್ರಸ್ತುತ ಈ ಕಾಮಗಾರಿಗಳು ಯಾವ ಹಂತದಲ್ಲಿದೆ ; ಪ್ರತಿಯೊಂದು ಕಾಮಗಾರಿಯ ವಿವರ ನೀಡುವುದು;

(ಈ) ಪ್ರಸ್ತುತ ಬಳ್ಳಾರಿ ನಗರಕ್ಕೆ ಯಾವ ರೀತಿ ಮತ್ತು ಹೇಗೆ ಎಷ್ಟು ಸಮಯಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ? (ವಿವರ ನೀಡುವುದು)

## ರಾಜ್ಯದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರ ಕುರಿತು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) –**

೯೦೨ (೧೧೩೨) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಇರುವ ನಗರಾಭಿವೃದ್ಧಿ ಪ್ರಾಧಿಕಾರಗಳು ಎಷ್ಟು;

(ಆ) ಕಳೆದ ೦೩ ವರ್ಷಗಳಿಂದ ಈ ಪ್ರಾಧಿಕಾರಗಳಿಂದ ನಿರ್ಮಿಸಿರುವ ಬಡಾವಣೆಗಳೆಷ್ಟು;

(ಇ) ಪ್ರಸ್ತುತ ಬೆಂಗಳೂರು ಹಾಗೂ ಆಸುಪಾಸಿನ ಸ್ಥಳಗಳಲ್ಲಿ ಎಲ್ಲೆಲ್ಲಿ ಬಡಾವಣೆಗಳನ್ನು ನಿರ್ಮಿಸಲು ಪ್ರಾಧಿಕಾರಗಳು ಯೋಚಿಸಿದೆ; ಹಾಗೂ ಇದರ ಸ್ಥಿತಿಗತಿಗಳೇನು ?

## ಅನಧಿಕೃತವಾಗಿ ನಿರ್ಮಿಸಿರುವ ವಸತಿ ಮತ್ತು ವಾಣಿಜ್ಯ ಕಟ್ಟಡಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೯೦೩ (೧೧೩೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ಬಡಾವಣೆಗಳಲ್ಲಿ ಖಾಲಿ ಇರುವ ವಸತಿ ನಿವೇಶನಗಳ ಸಂಖ್ಯೆ ಎಷ್ಟು;

(ಆ) ಈ ನಿವೇಶನಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಸತಿ ಮತ್ತು ವಾಣಿಜ್ಯ ಕಟ್ಟಡಗಳೆಷ್ಟು ;

(ಇ) ಅನಧಿಕೃತ ಕಟ್ಟಡಗಳ ತೆರವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಈ ಪೈಕಿ ಇದುವರೆವಿಗೂ ತೆರವುಗೊಳಿಸಿರುವ ನಿವೇಶನಗಳ ಸಂಖ್ಯೆ ಎಷ್ಟು ? (ಬಡಾವಣೆವಾರು ವಿವರಗಳನ್ನು ಸಲ್ಲಿಸುವುದು)

## ಕೆರೆ ಅಂಗಳದಲ್ಲಿ ಬಡಾವಣೆ ನಿರ್ಮಿಸುವ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೯೦೪ (೧೧೩೩) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ನಗರದ ಕೆರೆ ಅಂಗಳದಲ್ಲಿ ನಿರ್ಮಿಸಿರುವ ಬಡಾವಣೆಗಳು ಎಷ್ಟು;

(ಆ) ಆ ಪೈಕಿ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ;

(ಇ) ಇನ್ನೂ ಹಂಚಿಕೆ ಮಾಡಬೇಕಾಗಿರುವ ನಿವೇಶನಗಳ ಸಂಖ್ಯೆ ಎಷ್ಟು ? (ಕೆರೆವಾರು ವಿವರಗಳನ್ನು ಸಲ್ಲಿಸುವುದು)

## ಕಲಬುರಗಿ ಮತ್ತು ಯಾದಗಿರಿ ನಗರ ರಸ್ತೆ ಅಭಿವೃದ್ಧಿ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦೫ (೧೧೩೯) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ನಗರಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ರಸ್ತೆಗಳು, ಚರಂಡಿ ಹಾಗೂ ಇನ್ನಿತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

(ಆ) ಮಾಡಿದ್ದಲ್ಲಿ, ಈ ಯೋಜನೆಯಡಿ ಕೈಗೊಳ್ಳಲಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ?

## ೨೦೧೨ರಿಂದ ಇಲ್ಲಿಯವರೆಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆ ಅನುಷ್ಠಾನಗೊಂಡ ಯೋಜನೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦೬ (೧೧೩೮) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೨ನೇ ಸಾಲಿನಿಂದ ಇಲ್ಲಿಯವರೆಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆ ವತಿಯಿಂದ ಅನುಷ್ಠಾನಗೊಂಡ ಯೋಜನೆಗಳು ಯಾವುವು;

(ಆ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು; ಅವುಗಳ ರೂಪರೇಷಗಳೇನು?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆ ಕೆ.ಐ.ಎ.ಡಿ.ಬಿ. ಭೂಸ್ವಾಧೀನದ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦೭ (೧೧೩೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಕೆ.ಐ.ಎ.ಡಿ.ಬಿ. ಇಲಾಖೆಯಿಂದ ಎಷ್ಟು ಎಕರೆಯ ಭೂಮಿಯನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ;

(ಆ) ೨೦೦೭ನೇ ಸಾಲಿನಲ್ಲಿ ಈ ಇಲಾಖೆಯ (೨೦೦೦) ಎರಡು ಸಾವಿರ ಹೆಕ್ಟರ್ ಪ್ರದೇಶದ ರೈತರ ಜಮೀನನ್ನು ವಶಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ಜಮೀನು ಯಾವ ಹಂತದಲ್ಲಿದೆ; ರೈತರಿಗೆ ಸರ್ಕಾರ ನಿಗದಿಪಡಿಸಿದ ಹಣ ಎಷ್ಟು; ಒದಗಿಸಲಾಗಿರುವ ಹಣ ಎಷ್ಟು; ನೀಡದಿದ್ದಲ್ಲಿ, ಇದಕ್ಕೆ ಕಾರಣಗಳೇನು; (ವಿವರ ನೀಡುವುದು)

(ಈ) ಕಲಬುರಗಿ ನಗರ ಪ್ರದೇಶದ ಬೊಸ್ಕ ಮತ್ತು ಸುತ್ತಮುತ್ತಲಿನ ನಗರ ಪ್ರದೇಶದಲ್ಲಿ ರೈತರಿಗೆ ಜಮೀನು ಖರೀದಿಗಾಗಿ ಸರ್ಕಾರ ಭರವಸೆ ಪತ್ರ ನೀಡಲಾಗಿದ್ದು ಇದುವರೆಗೂ ಆ ಜಮೀನು ಖರೀದಿಸದೇ ಇರುವುದು ಮತ್ತು ರೈತರ ಸ್ವಾಧೀನಕ್ಕಾಗಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಕೊಳಚೆ ನೀರಿನ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೯೦೮ (೧೧೪೫) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುತ್ತಿರುವ ಕೊಳಚೆ ನೀರಿನ ಪ್ರಮಾಣವೆಷ್ಟು;

(ಆ) ಬೆಂಗಳೂರು ಮಹಾನಗರ ಪಾಲಿಕೆಯು ವ್ಯಾಪ್ತಿಯಲ್ಲಿ ಉತ್ಪಾದನೆಯಾಗುತ್ತಿರುವ ಪೂರ್ಣ ಪ್ರಮಾಣದ ಕೊಳಚೆ ನೀರನ್ನು ಸಂಸ್ಕರಣೆಗೆ ಅಳವಡಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳನ್ನು ನೀಡುವುದು;

(ಇ) ಸಂಸ್ಕರಣೆಗೊಂಡ ಕೊಳಚೆ ನೀರಿನ ಗುಣಮಟ್ಟವನ್ನು ದೃಢೀಕರಿಸಲು ಇರುವ ಮಾನದಂಡಗಳೇನು;

(ಈ) ಈ ರೀತಿ ಸಂಸ್ಕರಣೆಯಾದ ನೀರನ್ನು ಯಾವ ರೀತಿ ಬಳಸಲಾಗುತ್ತಿದೆ;

(ಉ) ಈ ಕೊಳಚೆ ನೀರಿನಿಂದ ವಿದ್ಯುತ್ ಹಾಗೂ ಸಾವಯವಗೊಬ್ಬರ ಉತ್ಪಾದನೆ ಕುರಿತು ಸರ್ಕಾರ ಯೋಚಿಸಿದೆಯೇ? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಭಾನಾಮತಿಯ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೯೦೯ (೧೧೪೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿಶೇಷವಾಗಿ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಭಾನಾಮತಿ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿದ್ದು ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಮಾಠ ಮಂತ್ರಗಳ ನಂಬಿಕೆಯಲ್ಲಿ ಜನರಿಗೆ ಮೋಸ ಮಾಡಿ ಸಣ್ಣಮಕ್ಕಳ ಬಲಿದಾನವಾಗಿರುವ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ; ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಘನ ಮತ್ತು ದ್ರವ್ಯ ತ್ಯಾಜ್ಯಗಳ ಸಂಸ್ಕರಣೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೯೧೦ (೧೧೪೩) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದ ನಗರಗಳಿಗೆ ಸಂಬಂಧಪಟ್ಟಂತೆ ಘನ ಮತ್ತು ದ್ರವ್ಯ ತ್ಯಾಜ್ಯದ ಸಂಸ್ಕರಣೆ ದಿನ ಕಳೆದಂತೆ ದೊಡ್ಡ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ ಹಾಗೂ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಉತ್ಪನ್ನವಾಗುವ ಘನ ಮತ್ತು ದ್ರವ್ಯ ತ್ಯಾಜ್ಯಗಳ ಸಂಸ್ಕರಣೆಗಾಗಿ ಇರುವ ಮಾನದಂಡಗಳೇನು;

ಇ) ಈ ಮಾನದಂಡಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲಾಗುತ್ತಿದೆಯೇ;

ಈ) ಪ್ರಪಂಚದಲ್ಲಿ ಈಗಾಗಲೇ ಲಭ್ಯವಿರುವ ಆಧುನಿಕ ತಂತ್ರಜ್ಞಾನ ಬಳಸಿ ಘನ ಮತ್ತು ದ್ರವ್ಯ ತ್ಯಾಜ್ಯಗಳ ಸಂಸ್ಕರಣೆಗಾಗಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಘನ ಮತ್ತು ದ್ರವ್ಯ ತ್ಯಾಜ್ಯಗಳಿಂದ ಶಕ್ತಿಯ ಹಾಗೂ ಸಾವಯುವ ಗೊಬ್ಬರದ ಉತ್ಪಾದನೆಗೆ ಸರ್ಕಾರ ಯೋಚಿಸಿದೆಯೇ; ಯೋಚಿಸಿದ್ದಲ್ಲಿ ಪೂರ್ಣ ವಿವರ ಒದಗಿಸುವುದು?

## ಕರಾವಳಿ ಕರ್ನಾಟಕ ಪ್ರತಿಷ್ಠಿತ ಕಂಪನಿಯಾದ ಕುದುರೆಮುಖ ಕಬ್ಬಿಣ ಅದಿರು ಕಂಪನಿಯ ವಿವಿಧ ಕಟ್ಟಡಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೯೧೧ (೧೧೪೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಕರ್ನಾಟಕದ ಪ್ರತಿಷ್ಠಿತ ಕಂಪನಿಯಾದ ಕುದುರೆಮುಖ ಕಬ್ಬಿಣ ಅದಿರು ಕಂಪನಿಯು (K.O.I.C.L.) ಸ್ಥಗಿತಗೊಂಡಿದ್ದು, ಈ ಕಂಪನಿಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕಟ್ಟಡಗಳನ್ನು ಉಪಯೋಗಪಡಿಸಿಕೊಳ್ಳುವ ಬಗ್ಗೆ ಸರ್ಕಾರ ಯೋಚಿಸಿದೆಯೇ;

(ಆ) ಈ ಸಂಸ್ಥೆಯ ಟೌನ್‌ಶಿಪ್‌ನಲ್ಲಿ ೧೨೦೦ ವಸತಿ ಗೃಹಗಳು ಹಾಗೂ ಇತರೆ ಕಟ್ಟಡಗಳು ಶಿಥಿಲಗೊಳ್ಳುತ್ತಿರುವುದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಈ ಸಂಸ್ಥೆಯ ಆವರಣವು ಬಹಳ ವಿಶಾಲವಾದ ವಿಸ್ತೀರ್ಣವನ್ನು ಹೊಂದಿರುವುದರಿಂದ ರಾಜ್ಯ ಪೊಲೀಸ್ ತರಬೇತಿ ಸಂಸ್ಥೆ, ಅರಣ್ಯ ಶಾಸ್ತ್ರ ವಿಶ್ವವಿದ್ಯಾಲಯ, ಕಮಾಂಡೋ ತರಬೇತಿ ಸಂಸ್ಥೆ ಅಥವಾ ಭಾರತೀಯ ಸೇನೆಯ ತರಬೇತಿ ಸಂಸ್ಥೆಗಳ ಉಪಯೋಗಕ್ಕೆ ನೀಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ?

## ರಾಜ್ಯದಲ್ಲಿ ಹೆಚ್ಚುತ್ತಿರುವ ಸರಗಳ್ಳತನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) –**

೯೧೨ (೧೧೪೬+೧೧೫೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಸರಗಳ್ಳತನವನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆದ ಸರಗಳ್ಳತದ ವರ್ಷವಾರು ಹಾಗೂ ಆರಕ್ಷಕ ಠಾಣೆವಾರು ಮಾಹಿತಿಯನ್ನು ಒದಗಿಸುವುದು;

(ಇ) ಈ ಉಪಟಳ ನಿವಾರಣೆಗಳಿಗೆ ಸರ್ಕಾರ ವಿಶೇಷ ದಳವೊಂದನ್ನು ರಚಿಸುವ ಬಗ್ಗೆ ಯೋಚಿಸಿದೆಯೇ;

(ಈ) ಈ ಸರಗಳ್ಳತನದ ಪ್ರಕರಣಗಳು ದಿನೇ ದಿನೇ ಹೆಚ್ಚಿತ್ತಿದ್ದರೂ ಪೊಲೀಸರು ಇದನ್ನು ನಿಯಂತ್ರಿಸಲು ವಿಫಲರಾಗಿದ್ದು, ಇದನ್ನು ಪುನಶ್ಚೇತನಗೊಳಿಸಲು ವಿಶೇಷವಾದ ತಾಂತ್ರಿಕ ಮತ್ತು ತರಬೇತಿಯ ಅವಶ್ಯಕತೆಯನ್ನು ಪರಿಶೀಲಿಸಲಾಗುತ್ತಿದೆಯೇ?

## ರೇಷ್ಮೆ ಗೂಡಿನ ಬೆಲೆ ಕುಸಿತದ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೯೧೩ (೧೧೪೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾರುಕಟ್ಟೆಯಲ್ಲಿ ರೇಷ್ಮೆ ಗೂಡಿನ ಬೆಲೆ ಕುಸಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪ್ರಸ್ತುತ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ಗೂಡಿಗೆ ದೊರೆಯುತ್ತಿರುವ ದರ ಎಷ್ಟು; ಪ್ರತಿ ಕೆ.ಜಿ. ಗೂಡಿಗೆ ನಿಗದಿಪಡಿಸಲಾದ ಕನಿಷ್ಠ ಬೆಲೆ ಎಷ್ಟು; ಪ್ರತಿ ಕೆ.ಜಿ. ಗೂಡಿಗೆ ಸರ್ಕಾರ ನೀಡಲಾಗುತ್ತಿರುವ ಪ್ರೋತ್ಸಾಹ ಧನ ಎಷ್ಟು;

(ಇ) ಪ್ರತಿ ಕೆ.ಜಿ. ಗೂಡಿಗೆ ಕನಿಷ್ಠ ರೂ. ೨೫೦ ಬೆಲೆ ನಿಗದಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

(ಈ) ರೇಷ್ಮೆ ಗೂಡಿನ ಬೆಲೆ ನಿಗದಿ ಸಂಬಂಧ ಪರಿಷ್ಕರಣಾ ಸಮಿತಿ ರಚಿಸಲಾಗಿದೆಯೇ; ಸದರಿ ಸಮಿತಿಯ ಸದಸ್ಯರ ಪೂರ್ಣ ವಿವರ ನೀಡುವುದು;

(ಉ) ಬೆಲೆ ನಿಗದಿ ಸಂಬಂಧ ಸಮಿತಿಯು ಸರ್ಕಾರಕ್ಕೆ ಮಧ್ಯಂತರ ವರದಿಯನ್ನು ನೀಡಿದೆಯೇ;

(ಊ) ಹಾಗಿದ್ದಲ್ಲಿ, ವರದಿಯ ಮುಖ್ಯಾಂಶಗಳೇನು;

(ಋ) ತೊಂದರೆಗೊಳಗಾದ ರೈತರ ನೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

## ಹೈದರಾಬಾದ್–ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ವಿಳಂಬದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೯೧೪ (೧೪೮೦) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಇದೂವರೆಗೂ ಖಾಲಿ ಇರುವ ಹುದ್ದೆಗಳನ್ನು ತುಂಬಲು ವಿಳಂಬ ವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಸರ್ಕಾರ ಖಾಲಿ ಇರುವ ಹುದ್ದೆಗಳನ್ನು ತುಂಬದಿರಲು ಸ್ಪಷ್ಟವಾದ ಕಾರಣಗಳೇನು; ಅತಿ ಶೀಘ್ರವಾಗಿ ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕಳೆದ ೭ ತಿಂಗಳ ಹಿಂದೆ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದರೆ, ವಿಳಂಬವಾಗಲು

ಕಾರಣಗಳೇನು ; ಈ ಹುದ್ದೆಗಳನ್ನು ತುಂಬಲು ಕಾಲಮಿತಯನ್ನು ನಿಗದಿಪಡಿಸಲಾಗಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಎಲ್ಲಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ? (ಇಲಾಖಾವಾರು. ಜಿಲ್ಲಾವಾರು ವಿವರ ನೀಡುವುದು)

## ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಕೆ.ಎ.ಟಿ. ಪೀಠ ಸ್ಥಾಪಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೯೧೫ (೧೪೯೪) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕೆ.ಎ.ಟಿ. ಪೀಠಗಳಿವೆ; ಕೆ.ಎ.ಟಿ. ಪೀಠ ಸ್ಥಾಪನೆಯ ಉದ್ದೇಶವೇನು;

(ಆ) ಈ ಪೀಠಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಸಮಯದ ಮಿತಿಯೊಳಗೆ ಪ್ರಕರಣಗಳು ಇತ್ಯರ್ಥವಾಗದಿದ್ದಲ್ಲಿ ಪೀಠ ಸ್ಥಾಪನೆಯ ಉದ್ದೇಶ ಈಡೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಬಾಕಿ ಇರುವ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಕೆ.ಎ.ಟಿ.ಯಲ್ಲಿ ಖಾಲಿ ಇರುವ ಸದಸ್ಯರ ಸಂಖ್ಯೆ ಎಷ್ಟು; ಖಾಲಿ ಇರುವ ಸದಸ್ಯರ ನೇಮಕಕ್ಕೆ ಸರ್ಕಾರದ ಕ್ರಮವೇನು;

(ಉ) ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಕೆ.ಎ.ಟಿ ಪೀಠ ಸ್ಥಾಪಿಸಬೇಕೆಂದು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಬೇಡಿಕೆ ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಿ–ವರ್ಗದ ದೇವಸ್ಥಾನಗಳ ನಿರ್ವಹಣೆ ಕುರಿತು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) –**

೯೧೬ (೧೪೯೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸಿ–ವರ್ಗದ ದೇವಸ್ಥಾನಗಳು ಎಷ್ಟು; ಯಾವುವು; (ವಿವರ ನೀಡುವುದು)

(ಆ) ಸಿ–ವರ್ಗದ ದೇವಸ್ಥಾನಗಳ ನಿರ್ವಹಣೆ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಈ ದೇವಸ್ಥಾನಗಳ ಅರ್ಚಕರಿಗೆ ಪ್ರತಿ ವರ್ಷಕ್ಕೊಮ್ಮೆ ೨ ಜೊತೆ ಸಮವಸ್ತ್ರ ನೀಡಲು ಬೇಡಿಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಸಿ–ವರ್ಗದ ದೇವಸ್ಥಾನದ ಅರ್ಚಕರಿಗೆ ಸಮವಸ್ತ್ರವನ್ನು ಈ ವರ್ಷದಿಂದ ನೀಡಲು ಕ್ರಮ ಕೈಗೊಳ್ಳಲಾಗುವುದೆ;

(ಉ) ಅರ್ಚಕರಿಗೆ ಗೌರವಧನ ನೀಡುವಂತೆ ಹಲವಾರು ವರ್ಷಗಳಿಂದ ಬೇಡಿಕೆ ಇದ್ದರೂ ನೀಡದಿರಲು ಕಾರಣವೇನು?

## ಸೀಗೆಹಳ್ಳಿ ಪಶು ಚಿಕಿತ್ಸಾಲಯ ಉನ್ನತೀಕರಣ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) –**

೯೧೭ (೧೪೮೯) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ, ಸೀಗೇಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಪಶುಚಿಕಿತ್ಸಾಲಯ ಎಷ್ಟು ವರ್ಷದಿಂದ ಸೇವೆಯಲ್ಲಿದೆ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಬಾಡಿಗೆ ಕಟ್ಟಡದಲ್ಲಿರುವ ಈ ಪಶು ಚಿಕಿತ್ಸಾಲಂಯು ಆಸ್ಪತ್ರೆಗೆ ಸ್ವಂತ ಕಟ್ಟಡ ಕಟ್ಟದಿರಲು ಕಾರಣವೇನು;

(ಇ) ಹಲವಾರು ಹಳ್ಳಿಗಳಿಗೆ ಸೇವೆ ಕೊಡುತ್ತಿರುವ ಈ ಪ್ರಾಥಮಿಕ ಆಸ್ಪತ್ರೆಯನ್ನು ಉನ್ನತ್ತೀಕರಿಸಿ, ಮೇಲ್ದರ್ಜೆಗೇರಿಸದಿರಲು ಕಾರಣಗಳೇನು;

(ಈ) ಈ ವರ್ಷ ಮೇಲ್ದರ್ಜೆಗೇರಿಸಿ ಉನ್ನತ್ತೀಕರಣ ಮಾಡಿ ಸ್ವಂತ ಕಟ್ಟಡ ನಿರ್ಮಿಸಲಾಗುವುದೇ?

## ಸಿ–ವರ್ಗದ ದೇವಸ್ಥಾನಗಳ ಅರ್ಚಕರಿಗೆ ಆಗಮ ಶಾಸ್ತ್ರದ ವಿದ್ಯಾಭ್ಯಾಸ ಕುರಿತು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) –**

೯೧೮ (೧೪೮೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸಿ–ವರ್ಗದ ದೇವಸ್ಥಾನಗಳ ಅರ್ಚಕರಿಗೆ ಆಗಮಶಾಸ್ತ್ರ ವಿದ್ಯಾಭ್ಯಾಸ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಆ) ಜಿಲ್ಲಾ ಮಟ್ಟದಲ್ಲಿ ಪ್ರತಿಯೊಂದು ಜಿಲ್ಲೆಗೆ ಒಂದರಂತೆ ಅರ್ಚಕರ ಭವನ ನಿರ್ಮಾಣ ಮಾಡಲು ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರ ಕೂಡಲೇ ಅರ್ಚಕರ ಭವನಗಳನ್ನು ಜಿಲ್ಲೆಗೆ ಒಂದರಂತೆ ನಿರ್ಮಾಣ ಮಾಡಿ ಆ ಜಿಲ್ಲೆಗಳ ಅರ್ಚಕರಿಗೆ ಆಗಮಶಾಸ್ತ್ರ ಕಲಿಸಲು ಅನುಕೂಲ ಮಾಡಿಕೊಡಲಾಗುವುದೆ;

(ಈ) ಹಾಗಿದ್ದಲ್ಲಿ, ಈ ವರ್ಷದಿಂದ ಜಾರಿಗೆ ಬರುವಂತೆ ಕ್ರಮ ಕೈಗೊಳ್ಳಲಾಗುವುದೆ?

## ರೈತರು ಬೆಳೆದ ರೇಷ್ಮೆ ಧಾರಣೆ ಕಡಿಮೆಯಾಗುತ್ತಿರುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) –**

೯೧೯ (೧೪೮೬) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೇಷ್ಮ ಬೆಲೆ ದಿನೇ ದಿನೇ ಕುಸಿದು ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರೇಷ್ಮೆ ಬೆಲೆ ಕುಸಿಯಲು ಕಾರಣವೇನು; ರೇಷ್ಮ ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರಿಗೆ ಸರ್ಕಾರದಿಂದ ಸಿಗುವ ಸಹಾಯವೇನು;

(ಇ) ರಾಜ್ಯದಲ್ಲಿರುವ ರೇಷ್ಮೆ ರೀಲರ್ಸ್ ಸಂಖ್ಯೆ ಎಷ್ಟು; ಯಾವ್ಯಾವ ಜಿಲ್ಲೆಗಳಲ್ಲಿರುವುದೆಷ್ಟು; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಈ) ಹಾಲಿ ಕೆಲಸ ಮಾಡುತ್ತಿರುವ ರೀಲರ್ಸ್‌ಗಳಿಗೆ ಇರುವ ತೊಂದರೆಗಳೇನು; ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಅದಿರಿನ ಉತ್ಪಾದನೆ ಕುರಿತು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) –**

೯೨೦ (೧೪೮೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಣಿಗಾರಿಕೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ವಾರ್ಷಿಕ ಆದಾಯ ಎಷ್ಟು;

(ಆ) ಅದಿರನ್ನು ಉಪಯೋಗಿಸುವಂತಹ ರಾಜ್ಯದಲ್ಲಿರುವ ಕಾರ್ಖಾನೆಗಳು ಯಾವುವು; ಎಲ್ಲೆಲ್ಲಿ ಇದೆ;

(ಇ) ಹೊಸ ಗಣಿಗಾರಿಕೆಗೆ ಅನುಮತಿ ನೀಡಲು ಸರ್ಕಾರದ ಮಾನದಂಡವೇನು;

(ಈ) ಕಳೆದು ೨ ವರ್ಷಗಳಲ್ಲಿ ಹೊಸ ಗಣಿಗಾರಿಕೆಗೆ ಅರ್ಜಿ ಹಾಕಿರುವವರ ಸಂಖ್ಯೆ ಎಷ್ಟು? (ವಿವರ ನೀಡುವುದು)

## ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಟ್ಯಾಕ್ಸಿ ಮತ್ತು ಆಟೋ ವಾಹನಗಳ ನಿಲುಗಡೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨೧ (೧೪೯೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಂಪರ್ಕಕ್ಕೆ ಟ್ಯಾಕ್ಸಿ ಮತ್ತು ಆಟೋ ವಾಹನಗಳ ಅಧಿಕೃತ ನಿಲುಗಡೆ ತಾಣವನ್ನು ನಿರ್ಮಾಣ ಮಾಡಲಾಗಿದೆಯೇ;

(ಆ) ಹಾಗಿದ್ದರೆ, ಅಂತಹ ಎಷ್ಟು ನಿಲುಗಡೆ ತಾಣಗಳನ್ನು ನಿರ್ಮಾಣ ಮಾಡಲಾಗಿದೆ? (ಪೂರ್ಣ ಪಟ್ಟಿಯನ್ನು ದೂರವಾಣಿ ಸಂಖ್ಯೆ ಸಹಿತ ವಿವರ ನೀಡುವುದು)

## ಬೆಂಗಳೂರು ನಗರದಲ್ಲಿ ಸೊಳ್ಳೆಕಾಟ ಜಾಸ್ತಿಯಾಗಿರುವುದು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨೨ (೧೪೯೨) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಸೊಳ್ಳೆಗಳ ಕಾಟ ಅತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಮಹಾನಗರ ಪಾಲಿಕೆಯಲ್ಲಿ ಪ್ರತಿ ವರ್ಷ ಸೊಳ್ಳೆಗಳ ನಿಯಂತ್ರಣಕ್ಕೆ ಖರ್ಚು ಮಾಡುತ್ತಿರುವ ಹಣ ಎಷ್ಟು; ಸೊಳ್ಳೆ ಕಾಟ ನಿವಾರಣೆಗೆ ಮಹಾನಗರ ಪಾಲಿಕೆ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು)

## ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣ ರಸ್ತೆಗಳ ಅಗಲೀಕರಣ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೨೩ (೧೪೯೬) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣದಲ್ಲಿಯ ಯಾವ ಯಾವ ರಸ್ತೆಗಳನ್ನು ಮಾಸ್ಟರ್ ಪ್ಲಾನ್ ಮೂಲಕ ಅಗಲೀಕರಣಗೊಳಿಸಲು ಗುರುತಿಸಿ ಯೋಜನೆಯನ್ನು ರೂಪಿಸಲಾಗಿದೆಯೇ;

(ಆ) ಆ ರಸ್ತೆಗಳು ಯಾವುವು; ಮತ್ತು ಎಷ್ಟು ಅಗಲಳತೆ ಹೊಂದಿವೆ; ಯೋಜನೆ ಪೂರ್ತಿಗೊಂಡ ನಂತರ ಅವುಗಳು ಯಾವ ಯಾವ ಅಗಲಳತೆಯನ್ನು ಹೊಂದುತ್ತವೆ, ವಿವರಿಸುವುದು;

(ಇ) ಈ ಯೋಜನೆಗೆ ಸರ್ಕಾರದ ಅನುಮತಿ ದೊರೆತಿದೆಯೇ; ಹಾಗಿದ್ದಲ್ಲಿ, ಯಾವ ಹಂತದಲ್ಲಿವೆ; ಈ ಯೋಜನೆಗೆ ತಗಲುಬಹುದಾದ ಒಟ್ಟು ಅಂದಾಜು ವೆಚ್ಚ ಎಷ್ಟು?

## ಗೃಹರಕ್ಷಕ ಬಲಪಡಿಸುವ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೨೪ (೧೪೯೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗೃಹರಕ್ಷಕ ದಳದ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಅಂಕಿ ಸಂಖ್ಯೆಯನ್ನು ಒದಗಿಸುವುದು)

(ಆ) ಗೃಹರಕ್ಷಕ ದಳದಲ್ಲಿರುವ ಪ್ರತಿಯೊಬ್ಬರಿಗೂ ನೀಡುತ್ತಿರುವ ಸೌಲಭ್ಯಗಳು ಯಾವುವು; ದಿನ ಭತ್ಯೆ, ಪ್ರವಾಸ ಭತ್ಯೆ, ಸಮವಸ್ತ್ರಗಳು ಎಷ್ಟು; ಸಮವಸ್ತ್ರಗಳ ನಿರ್ವಹಣೆಗೆ ನೀಡುವ ಖರ್ಚು ಎಷ್ಟು;

(ಇ) ಗೃಹರಕ್ಷಕ ದಳದವರಿಗೆ ಕಾನೂನು ಸುವ್ಯವಸ್ಥೆ ಕಾಪಾಡಲು ಇರುವ ಅಧಿಕಾರಗಳು ಯಾವುವು;

(ಈ) ಅವರುಗಳಿಗೆ ಈಗಿರುವ ಸೌಲಭ್ಯಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

## ರಾಜ್ಯದಲ್ಲಿಯ ಸಂಚಾರ ನಿಯಂತ್ರಣ ಪೊಲೀಸ್ ಠಾಣೆಗಳ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೨೫ (೧೪೯೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸ್ಥಾನಗಳನ್ನು ಹೊರತುಪಡಿಸಿ ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಸಂಚಾರ ನಿಯಂತ್ರಣ ಪೊಲೀಸ್ ಠಾಣೆಗಳಿವೆ; (ವಿವರಿಸುವುದು)

(ಆ) ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಯಲ್ಲಿ ಎಷ್ಟು ಸಂಚಾರಿ ಪೊಲೀಸ್ ಠಾಣೆಗಳಿವೆ;

(ಇ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣದಲ್ಲಿ ಸಂಚಾರ ನಿಯಂತ್ರಣ ಪೊಲೀಸ್ ಠಾಣೆ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಸ್ಥಾಪಿಸಲಾಗುವುದು?

## ಜಾಹೀರಾತು ಫಲಕಗಳ (ಫ್ಲೆಕ್ಸ್)ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೯೨೬ (೧೫೦೦) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಜಾಹೀರಾತು ಫಲಕಗಳ ಸಂಖ್ಯೆ ಎಷ್ಟು;

(ಆ) ಇವುಗಳಲ್ಲಿ ಸರ್ಕಾರಿ ಜಾಹೀರಾತು ಫಲಕಗಳು ಹಾಗೂ ಖಾಸಗಿ ಜಾಹೀರಾತು ಫಲಕಗಳು ಎಷ್ಟು;

(ಇ) ಜಾಹೀರಾತು ಫಲಕಗಳಿಂದ ವಾರ್ಷಿಕವಾರು ಇರುವ ಆದಾಯವೆಷ್ಟು;

(ಈ) ಜಾಹೀರಾತು ಫಲಕಗಳಿಗೆ ಶುಲ್ಕವನ್ನು ವಿಧಿಸುವಾಗ ಅನುಸರಿಸುವ ಮಾನದಂಡಗಳೇನು;

(ಉ) ಜಾಹೀರಾತು ಫಲಕಗಳನ್ನು ಯಾವ–ಯಾವ ಸ್ಥಳಗಳಲ್ಲಿ ಅಳವಡಿಸಬೇಕೆಂದು ನಿಯಮಾವಳಿಗಳನ್ನು ರೂಪಿಸಲಾಗಿದೆ; (ವಿವರ ನೀಡುವುದು)

(ಊ) ಅನಧಿಕೃತ ಜಾಹೀರಾತು ಫಲಕಗಳೆಷ್ಟು; ಇವುಗಳನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಮುಜರಾಯಿ ದೇವಸ್ಥಾನಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೯೨೭ (೧೫೦೪) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು; ಸದರಿ ದೇವಸ್ಥಾನಗಳಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು;

(ಆ) ಮುಜರಾಯಿ ದೇವಸ್ಥಾನಗಳಿಂದ ಬರುತ್ತಿರುವ ವಾರ್ಷಿಕ ಆದಾಯ ಮತ್ತು ಭಕ್ತಾದಿಗಳ ದೇಣಿಗೆಯನ್ನು ಪರಿಪೂರ್ಣವಾಗಿ ದೇವಸ್ಥಾನಗಳ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತಿದೆಯೇ;

(ಇ) ಹಾಗಿದ್ದಲ್ಲಿ, ಪ್ರತಿ ಮುಜರಾಯಿ ದೇವಸ್ಥಾನದಿಂದ ಬರುವ ವಾರ್ಷಿಕ ವರಮಾನದಲ್ಲಿ ಶೇಕಡ ಎಷ್ಟರ ಪ್ರಮಾಣದಲ್ಲಿ ಸದರಿ ದೇವಸ್ಥಾನದ ಅಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ;

(ಈ) ಮುಜರಾಯಿ ದೇವಸ್ಥಾನಗಳಲ್ಲಿ ಭಕ್ತರಿಗೆ ಹೆಚ್ಚಿನ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ವಿಶೇಷವಾದಂತಹ ಕಾರ್ಯಕ್ರಮವನ್ನೇನಾದರೂ ಸರ್ಕಾರ ರೂಪಿಸಿದೆಯೇ; ಹಾಗಿದ್ದಲ್ಲಿ, ಅದರ ರೂಪುರೇಷೆಗಳೇನು?

## ಸಂಚಾರಿ ಪೊಲೀಸ್ ವಿಭಾಗಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೯೨೮ (೧೫೦೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಸಂಚಾರಿ ಪೊಲೀಸ್ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಪದನಾಮವಾರು ವಿವರ ನೀಡುವುದು)

(ಆ) ಈ ಸಿಬ್ಬಂದಿಯವರಿಂದ ಬೆಂಗಳೂರು ನಗರದ ಸಂಚಾರ ನಿಯಂತ್ರಣ ಸಾಧ್ಯವೇ;

(ಇ) ಸಂಚಾರಿ ಪೊಲೀಸ್‌ರಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಈ ಸಂಚಾರಿ ಪೊಲೀಸ್ ವಿಭಾಗಗಳ ಸಿಬ್ಬಂದಿಗಳ ಆರೋಗ್ಯ ಸಂರಕ್ಷಿಸಲು ಸರ್ಕಾರ ನೀಡಿರುವ ಸೌಲಭ್ಯಗಳೇನು?

## ಬೆಂಗಳೂರಿನಲ್ಲಿ ಮಳೆ ಬಂದಾಗ ಆಗುವ ಸಮಸ್ಯೆ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೯೨೯ (೧೫೦೨) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಮಳೆ ಬಂದಾಗ ರಸ್ತೆಗಳ ಮಧ್ಯ ಭಾಗದಲ್ಲಿ ಯಥೇಚ್ಛವಾಗಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ವಿಜಯಪುರ ನಗರದ ಸಂಚಾರ ಸುಧಾರಣೆಗೆ ತೆಗೆದುಕೊಂಡ ಕ್ರಮಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೯೩೦ (೧೫೦೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ನಗರ ಸಂಚಾರ ಸುಧಾರಣೆಗಾಗಿ ಕೈಗೊಂಡಿರುವ ಯೋಜನೆಗಳೇನು; (ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ೦೨ ವರ್ಷಗಳಲ್ಲಿ ವಿಜಯಪುರ ನಗರದ ಸುಗಮ ಸಂಚಾರ ವ್ಯವಸ್ಥೆಗಾಗಿ ಒದಗಿಸಿರುವ ಅನುದಾನ ಎಷ್ಟು; ವಿನಿಯೋಗಿಸಿದ ಅನುದಾನ ಎಷ್ಟು;

(ಇ) ಕಳೆದ ೨ ವರ್ಷಗಳಲ್ಲಿ ಸಂಚಾರ ವ್ಯವಸ್ಥೆಗೆ ಕೈಗೊಂಡಿರುವ ಕಾಮಗಾರಿಗಳೇನು? (ಸಂಪೂರ್ಣ ವಿವರ ನೀಡುವುದು)

## ಆರ್ಥಿಕ ಇಲಾಖೆಯಿಂದ ಕಳೆದ ೦೩ ವರ್ಷದಲ್ಲಿ ಲೋಕೋಪಯೋಗಿ CRFನ ಅಡಿಯ ಕಾಮಗಾರಿಗೆ ಒದಗಿಸಿದ ಅನುದಾನ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೯೩೧ (೧೫೦೬) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ CRF ಅಡಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಎಷ್ಟು ಕಾಮಗಾರಿಗಳನ್ನು ನಡೆಸಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಲಾಗಿದೆ; ಅವುಗಳ ಪಟ್ಟಿಯ ಜೊತೆಗೆ ಹಣಕಾಸು ಖರ್ಚು ವೆಚ್ಚಗಳ ವಿವರ ನೀಡುವುದು;

(ಆ) ಆರ್ಥಿಕ ಇಲಾಖೆಯ ಅನುಮೋದನೆ / ಅನುಮತಿ ಪಡೆಯದೆ ಕಾಮಗಾರಿಗಳನ್ನು ನಡೆಸಿರುವ ಪ್ರಕರಣಗಳು ನಡೆದಿವೆಯೇ; ಅಂತಹ ಪ್ರಕರಣಗಳಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಿರುವ ಹಣ ಎಷ್ಟು ಹಾಗೂ ಬಾಕಿ ಇರುವ ಹಣವೆಷ್ಟು?

## ರಾಜ್ಯದ ಸರ್ಕಾರಿ ನೌಕರರಿಗೆ ಕೊಡುತ್ತಿರುವ ಹೆಚ್.ಆರ್.ಎ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೯೩೨ (೧೫೦೭) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಎಲ್ಲೆಲ್ಲಿ ಎಷ್ಟೆಷ್ಟು ಮನೆ ಬಾಡಿಗೆ ಭತ್ಯೆ (ಹೆಚ್.ಆರ್.ಎ) ನೀಡಲಾಗುತ್ತಿದೆ;

(ಆ) ಬೆಳಗಾವಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ಮನೆ ಬಾಡಿಗೆ ಭತ್ಯೆ ಎಷ್ಟು;

(ಇ) ಬೆಳಗಾವಿ ಮಹಾನಗರದ ೨೦೧೧ರ ಜನಗಣತಿಯ ಪ್ರಕಾರ ಕಂಟೋನ್‌ಮೆಂಟ್ ಪ್ರದೇಶವು ಸೇರಿದಂತೆ ಇರುವ ಜನಸಂಖ್ಯೆ ಎಷ್ಟು;

(ಈ) ಬೆಳಗಾವಿ ಮಹಾನಗರದಲ್ಲಿ ಕೇಂದ್ರ ಸರ್ಕಾರಿ ನೌಕರರು ಪಡೆಯುತ್ತಿರುವ ಮನೆ ಬಾಡಿಗೆ ಭತ್ಯೆ ಪ್ರಮಾಣ ಎಷ್ಟು?

## ಬೆಳಗಾವಿ ಗಡಿ ವಿವಾದ ಸಲಹಾ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೯೩೩ (೧೪೮೫) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಡಿ ಸಲಹಾ ಸಮಿತಿಗೆ ಕಾನೂನಿನ ಅರಿವು ಹಾಗೂ ಗಡಿ ವಿಚಾರದ ಸಮಗ್ರ ಜ್ಞಾನವಿರುವ ಬೆಳಗಾವಿ ಬಗ್ಗೆ ಅಭಿರುಚಿ ಹೊಂದಿರುವ ಸದಸ್ಯರನ್ನು ಅಧ್ಯಕ್ಷರಿಗೆ ಸಹಾಯ ಮಾಡಲು ಸಲಹಾ ಸಮಿತಿಗೆ ನೇಮಿಸಲಾಗುವುದೇ;

(ಆ) ಸುಪ್ರೀಂ ಕೋರ್ಟಿನಲ್ಲಿ ಬೆಳಗಾವಿ ಗಡಿ ವಿವಾದದ ಸಲುವಾಗಿ ಕರ್ನಾಟಕದ ಪರವಾಗಿ ಕರ್ನಾಟಕ ರಾಜ್ಯ ಸರ್ಕಾರ ಕೋರ್ಟಿನಲ್ಲಿ ಸಮರ್ಥವಾಗಿ ಮಂಡಿಸಲು ಹಾಗೂ ಅಗತ್ಯ ದಾಖಲೆಗಳನ್ನು ಸಂಗ್ರಹಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

(ಇ) ಈಗ ನೇಮಿಸಿದ ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ ಸಹಾಯ ಮಾಡಲು ಹಾಗೂ ಸರ್ಕಾರದಿಂದ ಎಲ್ಲ ಅವಶ್ಯವಿರುವ ಮಾಹಿತಿ ಒದಗಿಸಲು ಕೋರ್ಟಿನಲ್ಲಿ ಸಮರ್ಥವಾಗಿ ನಿರ್ವಹಣೆ ಮಾಡಲು ಒಬ್ಬ ಹಿರಿಯ ಸಚಿವರಿಗೆ ಜವಾಬ್ದಾರಿ ವಹಿಸಲಾಗುವುದೇ;

(ಈ) ಬೆಳಗಾವಿ ದಾಖಲೆಗಳನ್ನು ಮತ್ತು ಸಾಕ್ಷಿ ಸಂಗ್ರಹಕ್ಕಾಗಿ ಬೆಳಗಾವಿಯಲ್ಲಿ ಒಂದು ಪ್ರಾದೇಶಿಕ ಕೇಂದ್ರ ಸ್ಥಾಪಿಸಲಾಗುವುದೇ;

(ಉ) ಮಹಾರಾಷ್ಟ್ರ ಸರ್ಕಾರ ಗಡಿ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಸಾಕ್ಷಿ ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ಚುರುಕುಗೊಳಿಸಿರುವ ಹಿನ್ನಲೆಯಲ್ಲಿ ಈ ಪ್ರಕರಣವನ್ನು ಸಮರ್ಥವಾಗಿ ವಾದಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿರುತ್ತದೆ; (ವಿವರ ಒದಗಿಸುವುದು)

(ಊ) ಗಡಿ ವಿಚಾರದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಕನ್ನಡಪರ ಸಂಘಟನೆಗಳ, ಕಾನೂನು ತಜ್ಞರ, ಸಾಹಿತಿಗಳ ಸಭೆಯಲ್ಲಿ ನಡೆದ ನಡುವಳಿಕೆಗಳನ್ನು ಇನ್ನೂವರೆಗೂ ಜಾರಿಗೆ ತರದೆ ಇದ್ದ ಸಂಗತಿ ನಿಜವೇ;

(ಋ) ಆ ಸಭೆಯಲ್ಲಿ ನಡೆದ ಯಾವ ನಡವಳಿಕೆಗಳನ್ನು ಕಾರ್ಯಗತಗೊಳಿಸಲಾಗುವುದು?

# ಹೊಸ ಹಿಂದೂ ಧಾರ್ಮಿಕ ಕಾಯಿದೆ ಅಸ್ತಿತ್ವದಲ್ಲಿ ಬರುವವರೆಗೆ ಈಗಿರುವ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯಿದೆಯನ್ನು ಮುಂದುವರೆಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೯೩೪ (೧೪೮೪) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ :–

(ಅ) ಮಠಗಳನ್ನು ನಿಯಂತ್ರಿಸುವ ಯಾವುದೇ ಕಾಯ್ದೆ ಹಾಗೂ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಕಾಯಿದೆ ಜಾರಿಯಲ್ಲಿ ಇರುವುದಿಲ್ಲ ಎಂಬ ಸಂಗತಿ ನಿಜವೇ;

(ಆ) ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮದಾಯ ದತ್ತಿ ಕಾಯಿದೆ ೧೯೯೭ ಅಡಿಯಲ್ಲಿ ತರುವ ಕಾಯಿದೆಯನ್ನು ಯಾವ ಉದ್ದೇಶಕ್ಕಾಗಿ ವಿಧಾನಸಭೆಯಲ್ಲಿ ಮಂಡಿಸಲಾಯಿತು; ಹಾಗೂ ಅದನ್ನು ಮಂಡಿಸಿ ಏಕೆ ಹಿಂದೆ ತೆಗೆದುಕೊಳ್ಳಲಾಯಿತು; ಹಿಂದೆ ತೆಗೆದುಕೊಳ್ಳುವ ಪೂರ್ವದಲ್ಲಿ ವಿಧಾನ ಸಭೆಯಲ್ಲಿ ಚರ್ಚೆಗೆ ಸರ್ಕಾರ ಏಕೆ ಅವಕಾಶ ಮಾಡಿಕೊಡಲಿಲ್ಲ;

(ಇ) ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಮ ಜೋಯಿಸ್ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಉನ್ನತ ಮಟ್ಟದ ಸಭೆಯು ದಿನಾಂಕ ೧೩–೦೯–೨೦೦೭ ರಂದು ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಯಾವ–ಯಾವ ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ; ಹಾಗೂ ಯಾವ–ಯಾವ ಸಲಹೆಗಳನ್ನು ಸರ್ಕಾರ ಒಪ್ಪಿಕೊಳ್ಳಲಾಗಿದೆ; ಈ ಸಮಿತಿಯಲ್ಲಿ ಇರುವ ಸದಸ್ಯರು ಯಾರು;

(ಈ) ವಿಧಾನ ಸಭೆಯಲ್ಲಿ ನ್ಯಾಯಮೂರ್ತಿ ಶ್ರೀ ರಾಮಜೋಯಿಸರ ಸಮಿತಿ ಬಗ್ಗೆ ಚರ್ಚಿಸಲು ಏಕೆ ಅವಕಾಶ ಮಾಡಿಕೊಡಲಿಲ್ಲ; (ವಿವರಿಸುವುದು)

(ಉ) ಮಠಗಳನ್ನು ನಿಯಂತ್ರಿಸಲು ಯಾವುದೇ ಕಾಯಿದೆ ಜಾರಿಯಲ್ಲಿ ಇಲ್ಲದೆ ಇರುವುದರಿಂದ ಮಠದ ಆಸ್ತಿಯನ್ನು ಪರಭಾರೆ ಮಾಡುತ್ತಿದ್ದು ಹಾಗೂ ಹಣದ ಅವ್ಯವಹಾರ ನಡೆಯುತ್ತಿದ್ದು ಕೆಲವು ಮಠಗಳಲ್ಲಿ ಸ್ವಾಮಿಗಳೇ ಇಲ್ಲದೆ ಇರುವುದರಿಂದ ಹೊಸ ಕಾಯಿದೆ ಬರುವವರೆಗೆ ಈಗಿರುವ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯಿದೆಯನ್ನು ಸರ್ಕಾರ ಮುಂದುವರೆಸಲಾಗುವುದೇ?

## ಬೆಳಗಾವಿಯಲ್ಲಿಯೂ ಸಹ ಬೆಂಗಳೂರು ಮಾದರಿಯಲ್ಲಿ ರಿಂಗ್ ರೋಡ್ ಯೋಜನೆ ಕೈಗೊಳ್ಳುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೯೩೫ (೧೪೮೧) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ನಗರವು ಸಹ ರಾಜ್ಯದ ಎರಡನೇ ರಾಜಧಾನಿ ಆಗುವ ಎಲ್ಲ ಅರ್ಹತೆಗಳನ್ನು ಹೊಂದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬೆಂಗಳೂರು ಮಾದರಿಯಲ್ಲಿ ಬೆಳಗಾವಿ ನಗರದಲ್ಲಿಯೂ ಸಹ ರಿಂಗ್ ರೋಡ್ ಮಾಡುವ ಸಲುವಾಗಿ ನೀಲಿ ನಕ್ಷೆ ತಯಾರಿಸಲು ಮಾನ್ಯ ಸಭಾಧ್ಯಕ್ಷರು ಬೆಳಗಾವಿಯಲ್ಲಿ ಅಧಿಕಾರಿಗಳ ಸಭೆಯಲ್ಲಿ ಸೂಚಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ;

(ಇ) ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

## ಬೆಳಗಾವಿಯಲ್ಲಿ ರಾಜ್ಯ ಗ್ರಾಹಕರ ವ್ಯಾಜ್ಯ ನಿವಾರಣಾ ಆಯೋಗ ಹಾಗೂ ಋಣ ಭಾರ ನ್ಯಾಯಾಧೀಕರಣ ಕಛೇರಿಗಳನ್ನು ಪ್ರಾರಂಭಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೯೩೬ (೧೪೮೨) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎರಡನೇ ರಾಜಧಾನಿ ಆಗುವ ಎಲ್ಲ ಅರ್ಹತೆ ಹೊಂದಿದ ಬೆಳಗಾವಿಯಲ್ಲಿ ರಾಜ್ಯ ಗ್ರಾಹಕರ ವ್ಯಾಜ್ಯ ನಿವಾರಣಾ ಆಯೋಗ ಹಾಗೂ ಋಣ ಭಾರ ಪರಿಹಾರ ನ್ಯಾಯಾಧೀಕರಣ ಕಛೇರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲು ಸರ್ಕಾರವು ಪರಿಶೀಲಿಸುವುದೇ;

(ಆ) ಈ ನಗರವು ಕಂದಾಯ ವಾಣಿಜ್ಯ ಮೊದಲಾದ ವಿಭಾಗವನ್ನು ಹೊಂದಿದ್ದು, ಇಲ್ಲಿ ರಾಜ್ಯ ಗ್ರಾಹಕರ ವ್ಯಾಜ್ಯ ನಿವಾರಣಾ ಆಯೋಗ ಹಾಗೂ ಋಣ ಭಾರ ಪರಿಹಾರ ನ್ಯಾಯಾಧೀಕರಣ ಕಛೇರಿಗಳನ್ನು ಪ್ರಾರಂಭಿಸಲಾಗುವುದೇ?

## ಮುಜರಾಯಿ ದೇವಸ್ಥಾನಗಳಲ್ಲಿ ಆನ್ ಲೈನ್ ಸೇವೆ ಹಾಗೂ ಕೊಠಡಿ ಕಾಯ್ದಿರಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೯೩೭ (೧೪೮೩) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಎಷ್ಟು ದೇವಸ್ಥಾನಗಳು ಬರುತ್ತವೆ;

(ಆ) ಬೆಳಗಾವಿ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಎಷ್ಟು ದೇವಸ್ಥಾನಗಳು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ; ಜಿಲ್ಲಾವಾರು ಹಾಗೂ ಆ ಜಿಲ್ಲೆಯಲ್ಲಿ ಬರುವ ದೇವಸ್ಥಾನಗಳ ಹೆಸರು ವಿಳಾಸ ಒದಗಿಸುವುದು;

(ಇ) ಈ ವರ್ಷ ರಾಜ್ಯದಲ್ಲಿ ಯಾವ-ಯಾವ ದೇವಸ್ಥಾನಗಳಿಗೆ ಆನ್‌ಲೈನ್ ಸೇವೆ ಹಾಗೂ ಕೊಠಡಿ ಕಾಯ್ದಿರಿಸುವ ಆದೇಶ ಹೊರಡಿಸಲಾಗಿದೆ; ಆ ದೇವಸ್ಥಾನಗಳ ಹೆಸರು ನೀಡುವುದು;

(ಈ) ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡ ದೇವಸ್ಥಾನದಲ್ಲಿ ಕೊಠಡಿಗಳು ಸಾಕಷ್ಟು ಇಲ್ಲದೆ ಹಾಗೂ ಇದ್ದ ರೂಮಗಳು ಸ್ವಚ್ಛ ಇಲ್ಲದೆ ಯಾವುದೇ ಮೂಲಭೂತ ಸೌಕರ್ಯವಿಲ್ಲದೆ ಇಲ್ಲಿ ಆನ್‌ಲೈನ್ ವ್ಯವಸ್ಥೆ ಮೂಲಕ ಕೊಠಡಿ ಕಾಯ್ದಿರಿಸುವುದು ಸರಿಯೇ;

(ಉ) ಈಗ ಆನ್‌ಲೈನ್ ಮೂಲಕ ಕಾಯ್ದಿರಿಸುತ್ತಿರುವ ದೇವಸ್ಥಾನಗಳ ಪ್ರತಿ ವರ್ಷದ ಆದಾಯ ಎಷ್ಟು; ಮುಂಗಡವಾಗಿ ಕಾಯ್ದಿರಿಸುವುದು ಹೇಗೆ; (ವಿವರ ನೀಡುವುದು)

(ಊ) ಶ್ರೀ ಕ್ಷೇತ್ರ ಸೊಗಲ (ಬೆಳಗಾವಿ ಜಿಲ್ಲೆ) ಹಾಗೂ ಶಿವಯೋಗಮಂದಿರ (ಬಾಗಲಕೋಟೆ ಜಿಲ್ಲೆ) ಯಲ್ಲಿಯೂ ಸಹ ಕೊಠಡಿ ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗುವುದೇ?

## ನಗರಾಭಿವೃದ್ಧಿ ಇಲಾಖೆಯ ನಿವೇಶನಗಳಿಗೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ) –**

೯೩೮ (೧೦೮೮) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೨ ವರ್ಷಗಳಲ್ಲಿ ಕಲಬುರಗಿ ಜಿಲ್ಲೆಗೆ ನಗಾರಾಭಿವೃದ್ಧಿ ಪ್ರಾಧಿಕಾರಗಳಿಂದ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ವಿವರ ಒದಗಿಸುವುದು)

(ಆ) ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; ಮತ್ತು ನಿವೇಶನಗಳನ್ನು ಪಡೆಯಲು ನಿಗಧಿಪಡಿಸಿರುವ ಶುಲ್ಕವೆಷ್ಟು;

(ಇ) ನಿವೇಶನಗಳನ್ನು ಹಂಚಿಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು?

## ಚಿತ್ರದುರ್ಗ, ದಾವಣಗೆರೆ ಜಿಲ್ಲೆಯಲ್ಲಿರುವ ಧಾರ್ಮಿಕ ದೇವಸ್ಥಾನಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) –**

೯೩೯ (೧೧೫೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಎಷ್ಟು ದೇವಸ್ಥಾನಗಳು ಬರುತ್ತವೆ;

(ಆ) ಈ ದೇವಾಲಯಗಳ ನಿರ್ವಹಣೆಗೆ ಯಾರನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ;

(ಇ) ರಾಜ್ಯದಲ್ಲಿ ದೇವಸ್ಥಾನಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಬೆಂಗಳೂರು ನಗರದಲ್ಲಿರುವ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್

**ಶ್ರೀ ನಾರಾಯಣ ಸಾ.ಬಾಂಡಗೆ (ವಿಧಾನಸಭೆಯಿಂದ ಚುನಾಯಿರಾದವರು) –**

೯೪೦ (೧೧೪೯) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್ ಎದುರು, ದರ್ಶನ್ ಫಾರಂ ಹತ್ತಿರ, ರಾಜರಾಜೇಶ್ವರಿ ನಗರ ಸಭೆ ವ್ಯಾಪ್ತಿಯ ಹೊಸಕೆರೆಹಳ್ಳಿ ಕೆರೆ ಕೋಡಿಯಿಂದ ಕೃಷ್ಣಪ್ಪ ಲೇಔಟ್‌ಗೆ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

(ಇ) ಈ ಪ್ರದೇಶದ ವ್ಯಾಪ್ತಿಯಲ್ಲಿ ಸುಮಾರು ೧೦೦ ರಿಂದ ೧೫೦ ಮನೆಗಳಿದ್ದು ಸದರಿ ಬಡಾವಣೆಗೆ ಹೆಸರಿನ ನಾಮ ಫಲಕವು ಸಹ ಇರುವುದಿಲ್ಲ, ಈ ಪ್ರದೇಶಕ್ಕೆ ಯಾವುದೇ ಮೂಲಭೂತ ಸೌಲಭ್ಯಗಳು ಇರುವುದಿಲ್ಲ, ಈ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಎಷ್ಟು ಹಣ ಬಜೆಟ್‌ನಲ್ಲಿ ಇಡಲಾಗಿದೆ? (ಮಾಹಿತಿ ನೀಡುವುದು)

## ೧೦ ವರ್ಷಗಳಿಂದ ಬೇರೆ ಜಿಲ್ಲೆಗಳಿಗೆ ವರ್ಗಾವಣೆ ಆಗದೇ ಇರುವ ಬಗ್ಗೆ

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೪೧ (೧೧೧೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೇರೆ ಜಿಲ್ಲೆಗಳಿಗೆ ವರ್ಗಾವಣೆ ಆಗದೇ ಕಳೆದ ಹತ್ತು ವರ್ಷಗಳಿಂದ ಬೆಂಗಳೂರು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವ ಇನ್ಸ್‌ಪೆಕ್ಟರ್‌ಗಳು ಮತ್ತು ಸಬ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು; (ಮಾಹಿತಿ ಒದಗಿಸುವುದು)

(ಆ) ಇದರಿಂದ ಬೆಂಗಳೂರು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಬೇರೆ ಜಿಲ್ಲೆಗಳ ಅಧಿಕಾರಿಗಳು ಅವಕಾಶ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಎಲ್ಲಾ ಅಧಿಕಾರಿಗಳಿಗೂ ಸೇವೆಗೆ ಸಮಾನ ಅವಕಾಶ ಒದಗಿಸಲು ಇಲಾಖೆ ಕೈಗೊಂಡಿರುವ ಕ್ರಮವೇನು? (ಮಾಹಿತಿ ಒದಗಿಸುವುದು)

## ಮೈಸೂರು ಮಹಾನಗರ ಪಾಲಿಕೆಗೆ ಬರುವ ಆದಾಯದ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪೨ (೧೧೦೨) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮಹಾನಗರ ಪಾಲಿಕೆಗೆ ಬರುವ ಆದಾಯ ಮೂಲಗಳಾವುವು ;

(ಆ) ಮೈಸೂರು ಮಹಾನಗರ ಪಾಲಿಕೆಗೆ ರಾಜ್ಯ ಸರ್ಕಾರ ೨೦೧೧-೧೨ನೇ ಸಾಲಿನಿಂದ ೨೦೧೪-೧೫ನೇ ಸಾಲಿನವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು ;

(ಇ) ನಗರೋತ್ಥಾನ ಯೋಜನೆಯಡಿಯಲ್ಲಿ ಕಳೆದ ಐದು ವರ್ಷದಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಈ) ಮೈಸೂರು ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವ ಒಂದು ಪ್ರವಾಸೋದ್ಯಮ ಕ್ಷೇತ್ರ, ಈ ಮೈಸೂರಿನ ಮೃಗಾಲಯದಲ್ಲಿ ವಾಹನ ನಿಲುಗಡೆಯ ಅವ್ಯವಸ್ಥೆ ಬಗ್ಗೆ ಪಾಲಕೆ ತೆಗೆದುಕೊಂಡಿರುವ ಕ್ರಮವೇನು ?

## ಹೊಸ ಕೈಗಾರಿಕಾ ನೀತಿಯ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪೩ (೧೦೯೫) ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸ ಕೈಗಾರಿಕಾ ನೀತಿಯ ಪ್ರಕಾರ ಎಷ್ಟು ಸಣ್ಣ ಉದ್ದಿಮೆದಾರರಿಗೆ ಸಹಾಯ ಧನ ಅಥವಾ ಪ್ರೋತ್ಸಾಹ ಧನವನ್ನು ನೀಡಲಾಗಿದೆ; ಯಾರ್ಯಾರು ಇದರ ಅನುಕೂಲತೆಯನ್ನು ಪಡೆದುಕೊಂಡಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ನೀಡುವ ಪ್ರೋತ್ಸಾಹ ಧನವನ್ನು ೨೦ ಲಕ್ಷದಿಂದ ೪೦ ಲಕ್ಷದವರೆಗೆ ಹೆಚ್ಚಿಸಲಾಗಿದ್ದು, ಮತ್ತು ಶೇ.೫% ಸಬ್ಸಿಡಿ ನೀಡಲಾಗುವುದೆಂದು ಸರ್ಕಾರ ಹೇಳಲಾಗಿದ್ದು ಇದರ ಅನುಕೂಲತೆಯನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆಯನ್ನು ಜಿಲ್ಲಾವಾರು ವಿವರಗಳೊಂದಿಗೆ ನೀಡುವುದು;

(ಇ) ದಕ್ಷಿಣ ಏಷ್ಯಾದಲ್ಲಿಯೇ, ಅತಿ ದೊಡ್ಡ ಹಾಗೂ ಹಳೆಯ ಕೈಗಾರಿಕಾ ಸಂಸ್ಥೆ ಟೌನ್‌ಷಿಪ್ (ಪೀಣ್ಯ) ಆಗಿ ಘೋಷಣೆ ಮಾಡಲಾಗಿದ್ದು, ಇಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

(ಈ) ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿಯ ಎಷ್ಟು ಯೋಜನೆಗಳಿಗೆ ಒಪ್ಪಿಗೆ ಸೂಚಿಸಿದೆ; ಬಿಡುಗಡೆ ಮಾಡಿದ ಹಣ ಎಷ್ಟು;

(ಉ) ಹೊಸ ಕೈಗಾರಿಕಾ ನೀತಿಯಲ್ಲಿ ೯೯ ವರ್ಷಗಳಿಗೆ ಗುತ್ತಿಗೆ ಕೊಡುವುದಾಗಿ ಹೇಳಲಾಗಿದ್ದು ಇದರ ಅನುಕೂಲತೆಯನ್ನು ಪಡೆದುಕೊಳ್ಳಲು ಅರ್ಜಿ ಸಲ್ಲಿಸಿರುವವರ ಜಿಲ್ಲಾವಾರು ಮಾಹಿತಿ ನೀಡುವುದು?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು